SEVA BHARATHI
सेवा ही परमो धर्मः


ಸಂಪುಟ : 06
ಸಂಚಿಕೆ : 04

# ಸೇವಾಪಥ

ಸೇವಾಭಾರತಿ(ರಿ.), ಬೆಳ್ತಂಗಡಿ ತಾ॥ ಇದರ
(ರಾಜ್ಯ ಪ್ರಶಸ್ತಿ ಪುರಸ್ಕೃತ ಸೇವಾ ಸಂಸ್ಥೆ-2022)

ಮಾಸಿಕ e–ನ್ಯೂಸ್ ಲೆಟರ್ – ಏಪ್ರಿಲ್ 2025

ಪ್ರಧಾನ ಕಚೇರಿ : ಸೇವಾನಿಕೇತನ, ಕನ್ಯಾಡಿ–।।, ಧರ್ಮಸ್ಥಳ ಅಂಚೆ, ಬೆಳ್ತಂಗಡಿ ತಾಲೂಕು, ದ.ಕ. – 574 216



## ಬೈಂದೂರಿನಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದವರ ಪುನಶ್ಚೇತನ ಕೇಂದ್ರ ಸೇವಾಧಾಮಕ್ಕೆ ಭೂಮಿಪೂಜೆ

## ಬೆಂಗಳೂರಿನ ಪ್ರಕರ್ಷ ಅಕಾಡೆಮಿಯಿಂದ ಸೇವಾಭಾರತಿಗೆ ಉತ್ತಮ ಸಂಸ್ಥೆಯ ಗೌರವ

## ಉಚಿತ ಟೈಲರಿಂಗ್ ತರಬೇತಿಗಳು

## 31ನೇ ಶಿಬಿರದ ಸಮಾರೋಪ 32ನೇ ಶಿಬಿರದ ಉದ್ಘಾಟನೆ

## ಸೇವಾಭಾರತಿ ತಂಡದಿಂದ ರಾಜ್ಯಸಭಾ ಸದಸ್ಯರಾದ ಡಾ. ಡಿ.ವಿ.ಹೆಗ್ಗಡೆ ಭೇಟಿ

## ಬಹಾಲ್ ಫೌಂಡೇಶನ್ ಮೂಲಕ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಆಶಾಕಿರಣವಾದ ಶಿಜೋ ವರ್ಗೀಸ್

ಯಶೋಗಾಥೆ

## ನಮ್ಮಿಂದಿಷ್ಟು

ಎಲ್ಲರಿಗೂ ನಮಸ್ಕಾರಗಳು,

ನಮ್ಮ ದಿವ್ಯಾಂಗತೆಗೆ ಒಂದು ದೊಡ್ಡ ಮೈಲುಗಲ್ಲು ಅಂತ ಅಭಿಮಾನದಿಂದ ಹೇಳಬಹುದು. ಏನೆಂದರೆ ಬೈಂದೂರಿನ ಶಾಸಕರ ನೇತೃತ್ವದಲ್ಲಿ ಸಮೃದ್ಧ ಬೈಂದೂರಿನ ಆಶ್ರಯದಲ್ಲಿ ಪಡುವರಿ ಗ್ರಾಮದ ಹೇನಬೇರುವಿನಲ್ಲಿ ಒಂದು ಪುನಶ್ಚೇತನ ಕೇಂದ್ರಕ್ಕೆ ಭೂಮಿಪೂಜೆ ನಡೆದಿರುವುದು. ಅಲ್ಲಿ ಸೇರಿದ ವ್ಯಕ್ತಿಗಳೆಲ್ಲರೂ ಸಮಾಜದ ಬಗ್ಗೆ ಕಳಕಳಿ ಹೊಂದಿದವರೇ. ಶಾಸಕರ ದೂರದರ್ಶಿತ್ವ ಇಡೀ ರಾಜ್ಯಕ್ಕೆ ಮಾದರಿಯಾಗಿದೆ ಮತ್ತು ದಿವ್ಯಾಂಗ ಕ್ಷೇತ್ರದಲ್ಲಿ ಹೆಮ್ಮೆ ಪಡುವಂತಾಗಿದೆ. ಮುಂದಿನ ತಿಂಗಳುಗಳಲ್ಲಿ ಅದರ ಕಾರ್ಯಾರಂಭ ಆಗುವಂತೆ ನಾವೆಲ್ಲರೂ ಪರಿಶ್ರಮ ಪಡಬೇಕಿದೆ. ಈ ನಿಟ್ಟಿನಲ್ಲಿ ಸೇವಾಭಾರತಿಯು ಹೆಜ್ಜೆ ಮುಂದಿಟ್ಟಿದೆ.

ಶಿಶಿಲ, ಶಿಬಾಜೆ, ಅರಸಿನಮಕ್ಕಿಯ ಸುತ್ತಮುತ್ತ ಟೈಲರಿಂಗ್ ತರಬೇತಿಯು ನಿರಂತರವಾಗಿ ನಡೆಯುತ್ತಿದೆ. ಒಂದಾದ ಮೇಲೊಂದರಂತೆ ಶಿಬಿರಗಳು ಸ್ಥಳೀಯ ಶ್ರೀಮತಿ ನೀತಾ ಎನ್ನುವ ಒಬ್ಬ ದಿಟ್ಟ ಮಹಿಳೆಯ ಪ್ರಭಾವ ಮತ್ತು ಪ್ರಯತ್ನಗಳಿಂದ ಎಲ್ಲಾ ಶಿಬಿರಗಳಲ್ಲಿ ಶಿಬಿರಾರ್ಥಿಗಳು ಹೆಚ್ಚಿನ ಸಂಖ್ಯೆಗಳಲ್ಲಿ ಭಾಗವಹಿಸುವುದಕ್ಕೆ ಕಾರಣವಾಗಿದೆ. ಅವರಿಗಂತು ನಮ್ಮ ಸಂಸ್ಥೆ ಆಭಾರಿಯಾಗಿದೆ.

ಇನ್ನು ಕಟ್ಟಡ ನಿರ್ಮಾಣ ಕಾರ್ಯ ಮತ್ತು ಸಂಪನ್ಮೂಲಗಳ ಕ್ರೋಢೀಕರಣ ಮುಂದುವರೆಯುತ್ತಿದೆ. ಭಗೀರಥ ಪ್ರಯತ್ನವಿದೆ. ಅದಕ್ಕಾಗಿ ತಂಡವಾಗಿ ಭೇಟಿಗಳು ನಡೆಯುತ್ತಿದೆ. ಮೇ ತಿಂಗಳ ಮಧ್ಯಭಾಗ ಅಡಿಪಾಯದ ಕಾರ್ಯ ಮುಗಿಯಲಿದೆ ಎಂಬ ವಿಶ್ವಾಸವಿದೆ.

ಇನ್ನು ಸಂಸ್ಥೆಯ ಅಭಿವೃದ್ಧಿ ಉದ್ದೇಶಿತ ಬೆಂಗಳೂರಿನ ಪ್ರಕರ್ಷ ಅಕಾಡೆಮಿಯಿಂದ ನಡೆದ ತರಬೇತಿಯಲ್ಲಿ ಉತ್ತಮ ನಿರ್ವಹಣೆಗಾಗಿ ನಮ್ಮ ತಂಡವನ್ನ ಗುರುತಿಸಿ ಗೌರವಿಸಲಾಗಿದ್ದು ಅಭಿನಂದನಾ ಪತ್ರ ಹಾಗೂ ಸ್ಮರಣಿಕೆ ಪ್ರಾಪ್ತವಾಗಿದೆ. ಇದು ಕೂಡ ಈ ಕ್ಷೇತ್ರದಲ್ಲಿ ನಮ್ಮ ಸಂಸ್ಥೆಯ ಗಟ್ಟಿತನಕ್ಕಾಗಿ ಕಾರಣವಾಗಲಿದೆ. ಒಟ್ಟಿನಲ್ಲಿ ರಾಷ್ಟ್ರಾಯ ಸ್ವಾಹಃ ರಾಷ್ಟ್ರಾಯ ಇದಂ ನ ಮಮ ಎನ್ನುವಂತೆ ಎಲ್ಲವೂ ರಾಷ್ಟ್ರಕ್ಕೆ ಸಮರ್ಪಿತ. ಪ್ರತಿಫಲಾನುಭವಿಗಳಿಗೂ ಕೂಡ ಈ ಕಟ್ಟಡದ ನಿರ್ಮಾಣ ಕಾರ್ಯದಲ್ಲಿ ಒಳಗೊಳ್ಳಬೇಕೆಂಬ ಉದ್ದೇಶದಿಂದ ಕ್ಷೇತ್ರ ಸಂಯೋಜಕರು ಫಲಾನುಭವಿಗಳ ಮನೆಮನೆಗೆ ಭೇಟಿಯಾಗಿ ಮನವಿ ಸಲ್ಲಿಸುತ್ತಿದ್ದಾರೆ. ಒಂದು ಬ್ಯಾಗ್ ಸಿಮೆಂಟ್‌ನಿಂದ ತೊಡಗಿ ಅವರವರ ಸಾಮರ್ಥ್ಯಕ್ಕೆ ಅನುಗುಣವಾಗಿ ದೇಣಿಗೆ ನೀಡುತ್ತಿರುವುದು ಒಂದು ಉತ್ತಮ ಮತ್ತು ಮಾದರಿ ಬೆಳವಣಿಗೆಯೇ ಸರಿ.



ಸೇವಾ ಹೀ ಪರಮೋ ಧರ್ಮಃ
ತಾಯಿ ಭಾರತೀಯ ಸ್ಮರಣೆಗಳೊಂದಿಗೆ,

ಇತಿ ತಮ್ಮವ,
**ಕೆ. ವಿನಾಯಕ ರಾವ್**

## ನಮ್ಮ ವಿಳಾಸ


**ಪ್ರಧಾನ ಕಚೇರಿ :**

ಸೇವಾನಿಕೇತನ, ಕನ್ಯಾಡಿ–II
ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲೂಕು – 574 216
ಮೊ.: 99454 91241

**ಸೇವಾ ಕೇಂದ್ರ :**

ಸೇವಾಧಾಮ
(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ)
ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಬಳಿ
ಕೊಕ್ಕಡ ಗ್ರಾಮ – 574 198
ಮೊ.: 94482 54888


## ನಮ್ಮ ತಂಡ


| | |
|---|---|
| ಶ್ರೀಮತಿ ಸ್ವರ್ಣಗೌರಿ | – ಅಧ್ಯಕ್ಷರು |
| ಶ್ರೀ ಕೆ. ಯು. ಗಿರೀಶ್ ರಾವ್ | – ಉಪಾಧ್ಯಕ್ಷರು |
| ಶ್ರೀ ಕೆ. ಬಾಲಕೃಷ್ಣ | – ಕಾರ್ಯದರ್ಶಿ |
| ಶ್ರೀ ಕೆ. ವಿನಾಯಕ ರಾವ್ | – ಖಜಾಂಚಿ |
| ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ | – ಟ್ರಸ್ಟಿ |
| ಶ್ರೀ ಜಯರಾಜ್ ಸಾಲ್ಯಾನ್ | – ಟ್ರಸ್ಟಿ |
| ಶ್ರೀ ಪೃಥ್ವೀಶ್ | – ಟ್ರಸ್ಟಿ |


## ಸಲಹಾ ಮಂಡಳಿ


1. ಶ್ರೀ CA ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್
2. ಡಾ. ಎ. ಜಯಕುಮಾರ್ ಶೆಟ್ಟಿ
3. ಶ್ರೀಮತಿ ಮನೋರಮ ಭಟ್
4. ಶ್ರೀ ವಿಜಯ ಕೊಡವೂರು
5. ಶ್ರೀ ಆದಿತ್ಯ ಕಲ್ಲೂರಾಯ
6. ಶ್ರೀ ಕಿರಣ್ ರಾಜ್ ಕೆ.


## ಸಂಚಾಲಕರು


ಶ್ರೀ ಕೆ. ಪುರಂದರ ರಾವ್

# ಬೈಂದೂರಿನಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದವರ ಪುನಶ್ಚೇತನ ಕೇಂದ್ರ ಸೇವಾಧಾಮಕ್ಕೆ ಭೂಮಿಪೂಜೆ



**ಬೈಂದೂರು (ಏ: 28) :** ಸಮೃದ್ಧ ಬೈಂದೂರು ಪರಿಕಲ್ಪನೆಯ ಸೇವಾಸೇತು ಯೋಜನೆಯಡಿಯಲ್ಲಿ ಸೇವಾಭಾರತಿ (ರಿ.) ಕನ್ಯಾಡಿ ಸಹಯೋಗದೊಂದಿಗೆ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನೂತನ ಪುನಶ್ಚೇತನ ಕೇಂದ್ರ ಸೇವಾಧಾಮ ಇದರ ಭೂಮಿಪೂಜೆ ಕಾರ್ಯಕ್ರಮ ಏಪ್ರಿಲ್ 28 ರಂದು ಬೈಂದೂರಿನ ಪಡುವರಿ ಗ್ರಾಮದ ಹೇನಬೇರು ಇಲ್ಲಿ ನಡೆಯಿತು.


ಮಾನ್ಯ ಶಾಸಕರಾದ ಗುರುರಾಜ್ ಗಂಟಿಹೊಳೆ ಅವರು ಭೂಮಿಪೂಜೆಯನ್ನು ನೆರವೇರಿಸಿ ಈ ಒಂದು ಕೇಂದ್ರ ಬೈಂದೂರಿನ 38 ಮಂದಿ ದಿವ್ಯಾಂಗರ ಬಾಳಲ್ಲಿ ಆಶಾಕಿರಣವಾಗಲಿ. ರಾಜಕೀಯದ ಜೊತೆಜೊತೆಗೆ ಇನ್ನೊಬ್ಬರ ನೋವಿಗೆ ನಾವು ಸ್ಪಂದಿಸುವುದು ಸಹ ಮಹತ್ತರವಾದ ಕೆಲಸವಾಗಿದೆ. ಬೈಂದೂರಿನಲ್ಲಿ ಆಗುವಂತಹ ಈ ಒತ್ತಡಗಾಯ ನಿರ್ವಹಣೆ ಮತ್ತು ಪುನಶ್ವೇತನ ಕೇಂದ್ರವನ್ನು ಕರ್ನಾಟಕದಲ್ಲಿ 2ನೇ ಕೇಂದ್ರವನ್ನಾಗಿ ಪ್ರಾರಂಭಿಸಲಿದ್ದೇವೆ. ಈ ಒಂದು ಕೆಲಸವನ್ನು ಮಾಡಲು ಬಹಳ ಸಂತೋಷ ಇದೆ ಎಂದು ಶುಭಹಾರೈಸಿದರು.

ಈ ಸಂದರ್ಭದಲ್ಲಿ ಸಮೃದ್ಧ ಜನಸೇವಾ ಚಾರಿಟೇಬಲ್ ಟ್ರಸ್ಟ್‌ನ ಪ್ರಮುಖರಾದ ಶ್ರೀ ಬಿ.ಎಸ್.ಸುರೇಶ್ ಶೆಟ್ಟಿ, ಬರವಾಡಿ



ಮಾಜಿ ಜಿಲ್ಲಾಪಂಚಾಯತ್ ಸದಸ್ಯರು ಶ್ರೀ ಸುರೇಶ್, ಶಿರೂರು ಹಿರಿಯ ವೈದ್ಯಾಧಿಕಾರಿಗಳು ಡಾ. ಕೆ.ಪಿ.ನಬಿಯಾರ್, ಬೈಂದೂರು ಆರೋಗ್ಯ ಭಾರತಿ ಉಪಾಧ್ಯಕ್ಷರು ಡಾ. ಎ.ಎನ್.ಉಡುಪ ಸೇವಾಧಾಮ ಸಂಸ್ಥಾಪಕರು ಶ್ರೀ ಕೆ.ವಿನಾಯಕ ರಾವ್ ಮತ್ತು ಸೇವಾಭಾರತಿ ಕಾರ್ಯದರ್ಶಿ ಶ್ರೀ ಬಾಲಕೃಷ್ಣ ವೇದಿಕೆಯಲ್ಲಿ ಉಪಸ್ಥಿತರಿದ್ದರು.

# ಬೆಂಗಳೂರಿನ ಪ್ರಕರ್ಷ ಅಕಾಡೆಮಿಯಿಂದ ಸೇವಾಭಾರತಿಗೆ ಉತ್ತಮ ಸಂಸ್ಥೆಯ ಗೌರವ



**ಏಪ್ರಿಲ್ 25 :** ಬೆಂಗಳೂರಿನ ಪ್ರಕರ್ಶ ಅಕಾಡೆಮಿ ಸಂಸ್ಥೆಯು ಆಯೋಜಿಸಿದಂತಹ ಆರೋಹಣಂ ಸಮೂಹವು 2024–25 ರಲ್ಲಿ ನಡೆಸಿದ ಸೇವಾಸಂಸ್ಥೆಗಳ ಅಭಿವೃದ್ಧಿ ಮತ್ತು ನಿರಂತರತೆಗಾಗಿ ನಡೆಸಿದ ತರಬೇತಿಯಲ್ಲಿ ಉತ್ತಮ ನಿರ್ವಹಣೆ ಮತ್ತು ಅನುಕರಣೀಯ ಕಾರ್ಯಕ್ಷಮತೆಗಾಗಿ ಕನ್ಯಾಡಿ ಸೇವಾಭಾರತಿ ತಂಡಕ್ಕೆ ಪ್ರಶಸ್ತಿಪತ್ರ ಹಾಗೂ ಸ್ಮರಣಿಕೆ ನೀಡಿ ಗೌರವಿಸಲಾಯಿತು.

APF ನ ಶ್ರೀ ಆನಂದ್, ಯೂತ್ ಫರ್ ಸೇವ್ ಮತ್ತು ಪ್ರಕರ್ಶ ಅಕಾಡೆಮಿಯ ಸಂಸ್ಥಾಪಕ ಮತ್ತು ಮುಖ್ಯ ಮಾರ್ಗದರ್ಶಕ ಶ್ರೀ ವೆಂಕಟೇಶ್ ಮೂರ್ತಿ, ಪ್ರಕರ್ಶ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಜಗದೀಶ್ ಮಯ್ಯ, ಟ್ರಸ್ಟಿ ಶ್ರೀ ಸುದರ್ಶನ್, ಸೇವಾಧಾಮ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ.ವಿನಾಯಕ ರಾವ್ ಮತ್ತು ಕಾರ್ಯದರ್ಶಿ ಶ್ರೀ ಬಾಲಕೃಷ್ಣ, ಹಿರಿಯ ಪ್ರಬಂಧಕರಾದ ಶ್ರೀ ಚರಣ್ ಕುಮಾರ್ ಎಂ. ಉಪಸ್ಥಿತರಿದ್ದರು.

# ಸಂಪನ್ನಗೊಂಡ 31ನೇ ಉಚಿತ ಟೈಲರಿಂಗ್ ತರಬೇತಿ ಶಿಬಿರ



**ಅರಸಿನಮಕ್ಕಿ (ಏ. 20 ):** ಸೇವಾಭಾರತಿ (ರಿ.), ಕನ್ಯಾಡಿ ಇದರ ನೇತೃತ್ವದಲ್ಲಿ ಸಬಲಿನಿ ಯೋಜನೆಯಡಿ ಗ್ರಾಮ ಪಂಚಾಯತ್, ಅರಸಿನಮಕ್ಕಿ ಮತ್ತು ಹತ್ಯಡ್ಕ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ (ನಿ.), ಅರಸಿನಮಕ್ಕಿ ಇದರ ಸಹಭಾಗಿತ್ವದಲ್ಲಿ ಮಹಿಳೆಯರಿಗಾಗಿ 31ನೇ ಉಚಿತ ಟೈಲರಿಂಗ್ ತರಬೇತಿ ಶಿಬಿರದ ಸಮಾರೋಪ ಸಮಾರಂಭವು ಅರಸಿನಮಕ್ಕಿ ಹತ್ಯಡ್ಕ ಸಿ.ಎ. ಬ್ಯಾಂಕ್ ಸಭಾಂಗಣದಲ್ಲಿ ನಡೆಯಿತು.

ಅರಸಿನಮಕ್ಕಿ ಹತ್ಯಡ್ಕ ಪ್ರಾಥಮಿಕ ಕೃಷಿಪತ್ತಿನ ಸಹಕಾರಿ ಸಂಘ (ನಿ.), ಅಧ್ಯಕ್ಷರಾದ ಶ್ರೀ ರಾಘವೇಂದ್ರ ನಾಯಕ್ ಬರ್ಗುಳ ಅರಸಿನಮಕ್ಕಿ ಜನರಿಗೆ ಸ್ವಉದ್ಯೋಗ ಮಾಡುವ ಅವಕಾಶವನ್ನು ಕಲ್ಪಿಸಿಕೊಟ್ಟಿರುವುದು ಬಹಳ ಸಂತೋಷದ ವಿಷಯ ಹಾಗೂ ಸ್ವ – ಉದ್ಯೋಗಕ್ಕೆ ಸಮಾಜದಲ್ಲಿ ಹಲವಾರು ಬೇಡಿಕೆಗಳು ಇದ್ದು ಕಲಿತ ವಿದ್ಯೆಯನ್ನು ಮುಂದುವರಿಸಿಕೊಂಡು ಹೋಗಿ ಎಂದು ಶುಭಹಾರೈಸಿದರು.

ಕಾರ್ಯಕ್ರಮದಲ್ಲಿ ಸೇವಾಭಾರತಿ ಕನ್ಯಾಡಿಯ ಅಧ್ಯಕ್ಷೆ ಹಾಗೂ ಬೆಳ್ತಂಗಡಿ ತಾಲೂಕು ಮಹಿಳಾ ಸಹಕಾರಿ ಸಂಘ ಇದರ ಸಿಇಒ ಶ್ರೀಮತಿ ಸ್ವರ್ಣಗೌರಿ ಟೈಲರಿಂಗ್ ಕಲಿಯುವುದರಿಂದ ಬೇರೆ ಬೇರೆ ರೀತಿಯ ಸ್ವ – ಉದ್ಯೋಗದ ಅವಕಾಶವಿರುತ್ತದೆ.

ಪ್ರಸ್ತುತ ಕಾಲಘಟ್ಟದಲ್ಲಿ ಮಹಿಳೆಯರು ಯಾರಿಗೂ ಅವಲಂಬಿತವಾಗದೆ ಸ್ವಾವಲಂಬಿ ಜೀವನವನ್ನು ನಡೆಸುವುದು ಅತ್ಯಗತ್ಯವೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಟೈಲರಿಂಗ್ ತರಬೇತುದಾರರಾದ ಶ್ರೀಮತಿ ರೇಷ್ಮಾ ಜಯಪ್ರಸಾದ್ ಶೆಟ್ಟಿಗಾರ್ ಎಲ್ಲರಿಗೂ ಶುಭಹಾರೈಸಿ ಸಂತಸ ವ್ಯಕ್ತಪಡಿಸಿದರು.

ಸಂಸ್ಥೆಯ ಪರವಾಗಿ ಶ್ರೀಮತಿ ರೇಷ್ಮಾ ಜಯಪ್ರಸಾದ್ ಶೆಟ್ಟಿಗಾರ್‌ರವರನ್ನು ಸನ್ಮಾನಿಸಿ ಗೌರವಿಸಲಾಯಿತು. ನಂತರ ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರವನ್ನು ವಿತರಿಸಲಾಯಿತು.

ಅರಸಿನಮಕ್ಕಿ ಗ್ರಾಮ ಪಂಚಾಯತ್ ಉಪಾಧ್ಯಕ್ಷರಾದ ಶ್ರೀ ಸುಧೀರ್ ಕುಮಾರ್, ಕನ್ಯಾಡಿ ಸೇವಾಭಾರತಿ ಕಟ್ಟಡ ಸಮಿತಿ ಸದಸ್ಯರಾದ ಶ್ರೀ ಉದಯ ಶಂಕರ್ ಕೆ., ಸೇವಾಭಾರತಿ ಕಾರ್ಯದರ್ಶಿ ಶ್ರೀ ಬಾಲಕೃಷ್ಣ, ಮಾಜಿ ಸದಸ್ಯರು, ತಾಲೂಕು ಪಂಚಾಯತಿ ಶ್ರೀಮತಿ ಮಂಜುಳಾ ಕಾರಂತ್, ಶಿಶಿಲ ಬ್ಯಾಂಕ್ ಆಫ್ ಬರೋಡ ಬ್ಯಾಂಕ್ ಸಖಿ ಶ್ರೀಮತಿ ಧನ್ಯ ಗಣೇಶ್ ಹೊಸ್ತೋಟ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಒಟ್ಟು 29 ಮಂದಿ ಶಿಬಿರಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಶ್ರೀಮತಿ ಭವ್ಯ ಸ್ವಾಗತಿಸಿ, ಡಾಕ್ಯುಮೆಂಟೇಶನ್, ಮಾನಿಟರಿಂಗ್ ಮತ್ತು ಇವಲ್ಯೂವೇಟಿಂಗ್ ಕೋಆರ್ಡಿನೇಟರ್ ಸುಮ ಕಾರ್ಯಕ್ರಮ ನಿರೂಪಿಸಿ, ಕು. ರಶ್ಮಿತ ಧನ್ಯವಾದವಿತ್ತರು.

*I dont need easy, I just need possible*

## ಸೇವಾನಿಧಿ ದಾನಿಗಳು

ಶ್ರೀ ಕೆ. ಪುರಂದರ ರಾವ್, ಧರ್ಮಸ್ಥಳ
ಶ್ರೀಮತಿ ಜಯಂತಿ ಪುರಂದರ, ಧರ್ಮಸ್ಥಳ
ಶ್ರೀ ರಾಜಾರಾಮ್ ಕಾರಂತ್, ಬೆಂಗಳೂರು
ಶ್ರೀ ಬಾಲಸುಬ್ರಹ್ಮಣ್ಯ, ಬೆಂಗಳೂರು
Ms. ಸಂತೃಪ್ತಿ ಆರ್. ಫಡ್ಕೆ, ಬೆಳ್ತಂಗಡಿ
ವೆಲ್ವೆಟ್ ಟ್ರಾವೆಲ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು
ಶ್ರೀಮತಿ ಸ್ವರ್ಣಗೌರಿ, ಜೋಡುಸ್ಥಾನ
ಶ್ರೀಮತಿ ದಿವ್ಯ ಪುರಂದರ, ಬೆಂಗಳೂರು
ಡಾ. ರಾಮಕೃಷ್ಣ ಭಟ್ ಜಿ. ಎನ್., ಕನ್ಯಾಡಿ
ಮಾಸ್ಟರ್ ಅದ್ವೈತ್ ಪೈ, ಕನ್ಯಾಡಿ
ಶ್ರೀ ಕೆ. ವಿನಾಯಕ ರಾವ್, ಕನ್ಯಾಡಿ
ಶ್ರೀ ಕೆ. ಸೂರ್ಯನಾರಾಯಣ ರಾವ್, ಧರ್ಮಸ್ಥಳ
ಶ್ರೀ ಸುನಿಲ್ ಪಿ. ಎನ್., ಕನ್ಯಾಡಿ
ಶ್ರೀ ನೀಲಕಂಠ, ಧರ್ಮಸ್ಥಳ
ಶ್ರೀ ಕಾರ್ತಿಕ್ ಕೆ., ನೇತ್ರಾವತಿ
ಶ್ರೀ ಕೆ. ರಾಘವೇಂದ್ರ ಶಾಸ್ತ್ರಿ, ಧರ್ಮಸ್ಥಳ
ಶ್ರೀ ಪುರುಷೋತ್ತಮ್ ಡಿ. ಎ., ಧರ್ಮಸ್ಥಳ
ಶ್ರೀಮತಿ ಬಬಿತಾ, ಕನ್ಯಾಡಿ
ಮಾಸ್ಟರ್ ರಾಹುಲ್ ಪ್ರಭು, ಕನ್ಯಾಡಿ
ಶ್ರೀ ಅವಿನಾಶ್ ಶೆಟ್ಟಿ, ನೇತ್ರಾವತಿ
ಶ್ರೀ ಅಣ್ಣು ದೇವಾಡಿಗ, ನೇತ್ರಾವತಿ
ಶ್ರೀಮತಿ ಸವಿತಾ ಎಂ. ರಾವ್, ಕನ್ಯಾಡಿ
ಶ್ರೀ ಕೆ. ರಮೇಶ್ ಪೂಜಾರಿ, ಧರ್ಮಸ್ಥಳ
ಶ್ರೀ ಶಿವಕುಮಾರ, ಉಜಿರೆ
ಶ್ರೀ ಮಧುಸೂದನ್, ಉಜಿರೆ
ಶ್ರೀ ಅಖಿಲೇಶ್ ಕೆ. ಎಲ್., ಪುತ್ತೂರು
ಶ್ರೀ ಸುನಿಲ್ ಕುಮಾರ್ ಜೈನ್, ಧರ್ಮಸ್ಥಳ
ಶ್ರೀ ಬಿ. ಪುರಂದರ, ನಾರ್ಯ
ಬೇಬಿ ಶ್ರೀ ಬಿಲ್ವನಿ, ಉಜಿರೆ
ಶ್ರೀ ಜಿ. ಪುಟ್ಟ ಸ್ವಾಮಿ, ಉಜಿರೆ
ಹೋಟೆಲ್ ಬಾಂಬೆ ಡೈನ್, ಉಜಿರೆ
ಶ್ರೀ ಶೆಲ್ಡನ್ ಲೆನ್ಸಲೆಟ್ ಮೊನಿಸ್, ಬೆಳ್ತಂಗಡಿ
ಶ್ರೀ ಲಕ್ಷ್ಮೀನಾರಾಯಣ ರಾವ್, ಧರ್ಮಸ್ಥಳ
ಶ್ರೀ ಗೌರಿಶಂಕರ್ ರಾವ್, ಧರ್ಮಸ್ಥಳ

## ಮಹನೀಯ ದಾನಿಗಳು

ಶ್ರೀ ಕೆ. ಪುರಂದರ ರಾವ್, ಧರ್ಮಸ್ಥಳ
ಶ್ರೀ ವಿಠ್ಠಲ ಎಂ. ಕುಂಗೂರ್, ಬೆಂಗಳೂರು
ಶ್ರೀ ಗಿರೀಶ್, ಬೇಲೂರು
ಶ್ರೀ ಮೋಹನ್ ಎಸ್., ನಿಡ್ಲೆ
ಶ್ರೀ ಗಿರೀಶ್ ಹೆಚ್. ಎನ್., ಬೆಂಗಳೂರು
ಶ್ರೀ ಎಸ್. ಉಮೇಶ್, ಉಜಿರೆ
ಮಾಸ್ಟರ್ ತೇಜಸ್ ಆರ್., ಬೆಳ್ತಂಗಡಿ
ಶ್ರೀ ಬಿ. ಸುಭಾಶ್, ಕನ್ಯಾಡಿ
ಶ್ರೀ ಗೋವಿಂದ ಪೂಜಾರಿ, ಕನ್ಯಾಡಿ
ಶ್ರೀಮತಿ ಜೋಸ್ಫಿನಾ ಪಿ. ಟಿ., ಬೆಳ್ತಂಗಡಿ
ಶ್ರೀಮತಿ ಸುಮನಾ, ಬೆಂಗಳೂರು
ಶ್ರೀ ರಾಜೇಂದ್ರ ಅಜ್ರಿ, ಕನ್ಯಾಡಿ
ಶ್ರೀಮತಿ ವಿನಯ ಶೆಂಡ್ಯೆ, ಶಿಬಾಜೆ
31ನೇ ಉಚಿತ ಟೈಲರಿಂಗ್ ತರಬೇತಿ ಶಿಬಿರ, ಅರಸಿನಮಕ್ಕಿ
ಶ್ರೀ ಚಂದ್ರಶೇಖರ್ ಕುಲಾಲ್, ಬಂಟ್ವಾಳ
ಶ್ರೀಮತಿ ವಸಂತಿ ಗೌಡ, ಧರ್ಮಸ್ಥಳ
ರೂ। ಮಹೇಶ್ ತೆಲಂಗ, ಶಿರಸಿ
ಶ್ರೀಮತಿ ರೋಹಿಣಿ ಅಚ್ಯುತ ಗೌಡ, ಧರ್ಮಸ್ಥಳ
ಶ್ರೀಮತಿ ನೂರ್ಜಹಾನ್ ಇಬ್ರಾಹಿಂ ಶೈಖ್, ಬೆಂಗಳೂರು
ಡಾ ಹೃಷಿಕೇಶ್ ದಾಮ್ಲೆ, ಬೆಂಗಳೂರು
ಶ್ರೀ ಷಡಕ್ಷರಿ, ಬೆಂಗಳೂರು
ಶ್ರೀ ಕೆ. ಜಯರಾಜ್ ಸಾಲಿಯಾನ್, ಕಡಿರುದ್ಯಾವರ
ಶ್ರೀ ಜೀವನ್ ವಿನೋದ್ ಡಿಸೋಜಾ
ಶ್ರೀ ಗೌರವ್ ಸ್ವರೂಪ, ಉಜಿರೆ
ಶ್ರೀ ಕಿರಣ್ ಕುಮಾರ್, ಬೆಂಗಳೂರು

## ದೇಣಿಗೆ ನೀಡಿದ ಸಂಘ ಸಂಸ್ಥೆಗಳು

Chalet Hotel Limited, Bangalore
The Association of People with Disability, Bangalore
CR3 INDIA PRIVATE LIMITED, Bangalore

## ವಸ್ತು ರೂಪದಲ್ಲಿ ದೇಣಿಗೆ

ಸೇವ್ ಲೈಫ್ ಚಾರಿಟೇಬಲ್ ಟ್ರಸ್ಟ್, ಮಂಗಳೂರು
ಉಜಿರೆ ಹವ್ಯಕ ವಲಯ, ಉಜಿರೆ

## ಕಟ್ಟಡ ನಿರ್ಮಾಣಕ್ಕಾಗಿ ಫಲಾನುಭವಿಗಳಿಂದ ದೇಣಿಗೆ

ಶ್ರೀ ಶಶಿಧರ ಆರ್ ಪೂಜಾರಿ, ಮುಂಡ್ಕೂರು
ಶ್ರೀ ಎಂ ಎಂ ಶಾಜಿ, ಚಾರ್ಮಾಡಿ
ಶ್ರೀ ಸರ್ವೋತ್ತಮ ಎಸ್ ಅಮೀನ್, ಹೆರ್ಗ
ಶ್ರೀ ಇಬ್ರಾಹಿಂ, ತಣ್ಣೀರುಪಂಥ
ಶ್ರೀ ದಯಾನಂದ, ಕೂಡ್ಲಿಪೇಟೆ
ಶ್ರೀ ಚಂದ್ರ ಗೌಡ್ರು ಕೆ ಜಿ, ಕೊಡಗು
ಶ್ರೀ ಲೋಕೇಶ್ ಕೆ ಯು, ಕೊಡಗು
ಶ್ರೀಮತಿ ಪ್ರಮೀಳಾ ಸತ್ಯ, ಕೊಡಗು
ಶ್ರೀ ಸೈಫುದ್ದೀನ್ ಎಂ ಇ, ಕೊಡಗು
ಶ್ರೀ ಜಯಪ್ರಕಾಶ ಕೆ ಕೆ, ಕೊಡಗು
ಶ್ರೀ ನಂದಕುಮಾರ್ ಪಿ ಪಿ, ಕೊಡಗು
ಶ್ರೀ ಪಿ ತಿರುಮಲೇಶ್ವರ ಭಟ್, ಕಣಿಯೂರ್
ಶ್ರೀ ಪ್ರದೀಪ್ ಕೆ, ಪುತ್ತೂರು
ಶ್ರೀ ವಸಂತ ಮೊಗೇರ, ಆರಂಬೋಡಿ
ಶ್ರೀ ರಾಮಚಂದ್ರ ಗೌಡ, ಬೆಳ್ತಂಗಡಿ
ಶ್ರೀ ಕಿಟ್ಟಾ ಮಲೆಕುಡಿಯ, ನೂಜಾಡಿ
ಶ್ರೀ ಶ್ರೀನಿವಾಸ ನಾಯಿಕ, ಮುಂಡಾಜೆ
ಶ್ರೀ ಶಾಲು ಜೋಸೆಫ್, ಪೆರಿಯಡ್ಕ
ಶ್ರೀ ಥಾಮಸ್, ಚಿಬಿದ್ರೆ
ಶ್ರೀ ಚಂದ್ರಶೇಖರ ಭಟ್, ನಿಡ್ಲೆ
ಶ್ರೀ ತೋರಜಾಕ್ಷ, ಪಟ್ರಮೆ
ಶ್ರೀ ವರುಣ ಎಂ ಆರ್, ಹಾಸನ
ಶ್ರೀ ವಿ ಆರ್ ಕ್ಷೇತ್ರಪಾಲ, ಹಾಸನ
ಶ್ರೀ ಯಾಸೀನ್ ಪಾಷಾ, ಹಾಸನ
ಶ್ರೀ ಅರುಣ್, ಸಕಲೇಶಪುರ
ಶ್ರೀ ದೇವರಾಜು, ಆಲೂರು
ಶ್ರೀ ದೇವ್ ಸಿ ಮುಗೇರ, ಸಕಲೇಶಪುರ
ಶ್ರೀ ಎನ್ ಇ ಮಹೇಶ್ ಗೌಡ, ಬೇಲೂರು
ಶ್ರೀ ಬಿ ಎಂ ಚನ್ನಕೇಶವ, ಚಿಕ್ಕಮಗಳೂರು
ಶ್ರೀ ಪವನ್ ಬಿ ಆರ್, ಚಿಕ್ಕಮಗಳೂರು
ಶ್ರೀ ಧರ್ಮ, ಆಲೂರ್
ಶ್ರೀ ಕೆ ಜಯಣ್ಣ, ಚಿಕ್ಕಮಗಳೂರು
ಶ್ರೀ ಯೋಗೀಶ್ ಎಂ, ತರೀಕೆರೆ
ಶ್ರೀ ಶರೀಫ್ ಹೆಚ್ ಎಂ, ತರೀಕೆರೆ
ಶ್ರೀ ಮಹೇಶ್ ಎಚ್ ಕೆ, ತರೀಕೆರೆ
ಶ್ರೀ ಜಾನು ವಿ, ತರೀಕೆರೆ
ಶ್ರೀ ಟಿ ಜಿ ಗೋಪಿನಾಥ ಆಚಾರಿ, ಬಡಗಬೈಲು
ಶ್ರೀ ಜಾಯ್ ಸಿ ವಿ, ಎನ್ ಆರ್ ಪುರ
ಶ್ರೀ ಶಾಜು ಪಿ ಪಿ, ಎನ್ ಆರ್ ಪುರ
ಶ್ರೀ ನಂದನ್ ಕೆ ಪಿ, ಎನ್ ಆರ್ ಪುರ
ಶ್ರೀ ಮಂಜ ನಾಯ್ಕ್, ಕಡೂರು
ಶ್ರೀ ಮುರುಗನ್ ಎ, ಕೊಪ್ಪ
ಶ್ರೀ ಪೂರ್ಣೇಶ್ ಟಿ ಜಿ, ಶೃಂಗೇರಿ
ಶ್ರೀ ನಂದನ್ ಎಚ್ ಬಿ, ಚಿಕ್ಕಮಗಳೂರು
ಶ್ರೀ ರವಿ ಬಿ, ಆಲ್ದೂರು
ಶ್ರೀ ರಂಜಿತ್ ಸಿ ಎಂ, ಚಿಕ್ಕಮಗಳೂರು
ಶ್ರೀ ಮಂಜುನಾಥ್ ಎಸ್, ಮೂಡಿಗೆರೆ
ಶ್ರೀ ಪ್ರಶಾಂತ್ ತಾವ್ರೋ, ಮೂಡಿಗೆರೆ
ಶ್ರೀ ಮನೋಜ್, ಮೂಡಿಗೆರೆ
ಶ್ರೀ ಜನಾರ್ದನ್ ಎಸ್, ಮೂಡಿಗೆರೆ
ಶ್ರೀ ಮಧುಕೇಶ್ವರ ಜಿ ನಾಯ್ಕ್, ಹೆಮ್ಮಾಡಿ
ಶ್ರೀ ದತ್ತಾತ್ರೇಯ ಎನ್ ಭಟ್, ಶಿರಸಿ
ಶ್ರೀ ಜಾವೇದ್ ಅತ್ತರ್ ಎ, ಅಟ್ಗರ್
ಶ್ರೀ ಮಾಲತೇಶ್ ಯು, ಶಿರಸಿ
ಶ್ರೀ ಮೊಹಮ್ಮದ್ ಹನೀಫ್, ಯಲ್ಲಾಪುರ
ಶ್ರೀ ಲಕ್ಷ್ಮಣ್ ವಿ, ಅಂಬಿಗ
ಶ್ರೀ ಮಂಜುನಾಥ ಮಾದೇವ್, ಪಟಗಾರ
ಶ್ರೀ ತಿಮ್ಮು ವೆಂಕು ಗೌಡ, ಹೊನ್ನಾವರ
ಶ್ರೀ ಮಂಗಳಾ ಟಿ ಗೊಂಡ, ಭಟ್ಕಳ
ಶ್ರೀ ಉಮೇಶ ಎನ್ ಗೌಡ, ಸಿದ್ದಾಪುರ

*The world worries about disability more than disabled people do*

# ವಿಜ್ಞಾಪನೆಗಳು





ಸೇವಾಭಾರತಿ ಸಂಸ್ಥೆಯು ಕಳೆದ 20 ವರ್ಷಗಳಲ್ಲಿ ಸಾಮಾಜಿಕವಾಗಿ ಬೇರೆ–ಬೇರೆ ಕ್ಷೇತ್ರಗಳಲ್ಲಿ ಸೇವಾ ಕಾರ್ಯ–ಗಳನ್ನು ಮಾಡುತ್ತ ಬರುತ್ತಿದ್ದು, ಸಬಲಿನಿ ಯೋಜನೆಯಡಿ ಮಹಿಳೆಯರ ಆರ್ಥಿಕ ಸಬಲಿಕರಣಕ್ಕಾಗಿ ಉಚಿತ ಟೈಲರಿಂಗ್ ತರಬೇತಿಗಳು, ಆರೋಗ್ಯಮ್ ಯೋಜನೆಯಡಿ ಆಂಬುಲೆನ್ಸ್ ಸೇವೆ ಹಾಗೂ ರಕ್ತದಾನ ಶಿಬಿರಗಳು, ಸೇವಾಧಾಮ ಯೋಜನೆ–ಯಡಿ ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ, ಈ ಮೂರು ಯೋಜನೆಗಳು ಯಶಸ್ವಿಯಾಗಿ ನಡೆಯುತ್ತಿದೆ.

ನಮ್ಮ ಸಂಸ್ಥೆಯ ಸಮಾಜಮುಖಿ ಚಟುವಟಿಕೆಗಳನ್ನು ಉತ್ತೇಜಿಸುವ ದೃಷ್ಟಿಯಿಂದ ಕನ್ಯಾಡಿಯಲ್ಲಿ 2023ನೇ ವರ್ಷದಲ್ಲಿ ಸರ್ಕಾರವು ಒಟ್ಟು 10 ಸೆಂಟ್ಸ್ ಜಮೀನನ್ನು ನಮ್ಮ ಸಂಸ್ಥೆಯ ಕಟ್ಟಡ ನಿರ್ಮಾಣ ಉದ್ದೇಶಕ್ಕಾಗಿ ಮಂಜೂರುಗೊಳಿಸಿದೆ. ಪ್ರಸಕ್ತ ವರ್ಷದಲ್ಲಿ ಸೇವಾಭಾರತಿಯ ಕಾರ್ಯಚಟುವಟಿಕೆಗಳಿಗೆ ಹಾಗೂ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗಾಗಿ ಪುನಶ್ಚೇತನ ಕೇಂದ್ರದ ಉದ್ದೇಶಕ್ಕಾಗಿ ಕಟ್ಟಡ ನಿರ್ಮಾಣಕ್ಕೆ ಮುಂದಾಗಿದ್ದೇವೆ. ಅಲ್ಲದೆ ಧನಸಹಾಯ ನೀಡುವಂತೆ ಬೇರೆ ಬೇರೆ ಸಂಸ್ಥೆಗಳಿಗೆ ಮನವಿಯನ್ನೂ ಮಾಡಿದ್ದೇವೆ. ಈ ಮನವಿಗೆ ಸ್ಪಂದಿಸಿ ಮುಂಬರುವ ದಿನಗಳಲ್ಲಿ ಕಿಂಚಿತ್ತಾದರೂ ಸಿಗಬಹುದೆಂಬ ಆಶಾವಾದದಲ್ಲಿ ನಾವಿದ್ದೇವೆ. ನಮ್ಮ ಸಂಸ್ಥೆಯ ಕಟ್ಟಡದ ನಿರ್ಮಾಣಕ್ಕಾಗಿ ಒಟ್ಟು ಮೊತ್ತ ರೂ 3,05,72,580/– ಅಂದಾಜಿಸಲಾಗಿದ್ದು, ಇದರ ಮೊದಲ ಹಂತವಾಗಿ ನೆಲಮಹಡಿಗೆ ಮಂಗಳೂರಿನ **Mangalore Refinery and petrochemicals Limited (MRPL)** ನಿಂದ ರೂಪಾಯಿ 42 ಲಕ್ಷದಷ್ಟು ಮಂಜೂರಾಗಿದ್ದು ಒಂದು ವರ್ಷದ ಅವಧಿಯೊಳಗೆ ನಿರ್ಮಾಣ ಮಾಡಬೇಕಾಗಿದೆ. ಆದರೆ ಅಡಿಪಾಯ ಬೇಸ್ಮೆಂಟ್‌ನಲ್ಲಿ ಶೌಚಾಲಯ, ಒಂದು ಸೆಕ್ಯೂರಿಟಿ ರೂಮ್, ಸಂಪು ಹಾಗೂ ಪಾರ್ಕಿಂಗ್ ವ್ಯವಸ್ಥೆಗಳನ್ನು ನಿರ್ಮಾಣ ಮಾಡಬೇಕಿದೆ. ಇದಕ್ಕಾಗಿ ಒಟ್ಟು 60 ಲಕ್ಷ ರೂಪಾಯಿಗಳಷ್ಟು ವೆಚ್ಚವಾಗಲಿದೆ.

**ಒಟ್ಟು ಮೊತ್ತ ರೂ. 3,05,72,580/– ಅಂದಾಜಿಸಲಾಗಿದ್ದು. ಇದರ ನೆಲಮಹಡಿಗೆ ಮಂಗಳೂರಿನ MRPL 42 ಲಕ್ಷದಷ್ಟು ನೀಡಲಿದೆ.**

ಈವರೆಗೂ ತಾವು ನಮ್ಮ ಎಲ್ಲಾ ಯೋಜನೆಗಳಿಗೂ ಕೈಲಾದಷ್ಟು ಸಹಾಯ ನೀಡುತ್ತಿದ್ದು, ಈ ಬಾರಿ ಈ ಕಟ್ಟಡ ಕಟ್ಟಲು ಸಹಾಯ ನೀಡುವಿರೆಂದು ಭಾವಿಸಿದ್ದೇವೆ. ಈ ಕಟ್ಟಡವು ನಿರ್ಮಾಣಗೊಂಡು ಕಾರ್ಯಾಚರಿಸಲು ಪ್ರಾರಂಭಿಸಿದ್ದಲ್ಲಿ ರಾಜ್ಯದಾದ್ಯಂತವಿರುವ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಆಶಾಕಿರಣವಾಗಿ ಮಾದರಿಯಾದ ಪುನಶ್ಚೇತನ ಕೇಂದ್ರವಾಗುವುದರಲ್ಲಿ ಸಂಶಯವಿರುವುದಿಲ್ಲ. ಆದಕಾರಣ ನಮ್ಮ ಸಂಸ್ಥೆಗೆ ಧನಸಹಾಯ ನೀಡಿ ಈ ಯೋಜನೆಯನ್ನು ಯಶಸ್ವಿ–ಗೊಳಿಸಿಕೊಡಬೇಕೆಂದು ತಮ್ಮಲ್ಲಿ ಮತ್ತೊಮ್ಮೆ ಕಳಕಳಿಯ ವಿನಂತಿ.

## BANK ACCOUNT DETAILS

SEVABHARATHI REGD

237887292400920@cnrb

Scan & Pay also

| | | |
|---|---|---|
| A/c Name | : | Sevabharathi |
| Current A/c No | : | 120000400920 |
| IFSC | : | CNRB0010246 |

Canara Bank, Dharmasthala Branch

*When everyone else says you can't determination says, YES YOU CAN'*

# 32ನೇ ಉಚಿತ ಟೈಲರಿಂಗ್ ತರಬೇತಿ ಶಿಬಿರ ಉದ್ಘಾಟನೆ





**ನೇಲ್ಯಡ್ಕ (ಏ. 27):** ಸೇವಾಭಾರತಿ (ರಿ.), ಕನ್ಯಾಡಿ ಇದರ ನೇತೃತ್ವದಲ್ಲಿ ಸಬಲಿನಿ ಯೋಜನೆಯ ಡಿ.ಶಿವಾನಿ ಸಂಜೀವಿನಿ ಗ್ರಾಮ ಪಂಚಾಯತ್ ಮಟ್ಟದ ಮಹಿಳಾ ಒಕ್ಕೂಟ (ರಿ.), ಅರಸಿನಮಕ್ಕಿ ಇದರ ಸಹಭಾಗಿತ್ವದಲ್ಲಿ ಮಹಿಳೆಯರಿಗಾಗಿ ಉಚಿತ 32ನೇ ಟೈಲರಿಂಗ್ ತರಬೇತಿ ಶಿಬಿರದ ಉದ್ಘಾಟನೆ ಏಪ್ರಿಲ್ 27 ರಂದು ನೇಲ್ಯಡ್ಕದಲ್ಲಿ ನಡೆಯಿತು.

ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ಬೆಳ್ತಂಗಡಿ ಕೌಶಲ್ಯ NRLM ಮೇಲ್ವಿಚಾರಕರು ಶ್ರೀಮತಿ ವೀಣಾಶ್ರೀ ಕೆ.ಕೆ. ಚಾಲನೆ ನೀಡಿ, ಭಾಗವಹಿಸಿದ ಮಹಿಳೆಯರಿಗೆ ಶುಭಹಾರೈಸಿದರು. ಈ ತರಬೇತಿ ಶಿಬಿರವು ಸ್ವ–ಉದ್ಯೋಗದ ಕಡೆಗೆ ಮಹತ್ವದ ಹೆಜ್ಜೆಯಾಗಿದೆ ಎಂದರು.

ಸೇವಾಭಾರತಿ ಕನ್ಯಾಡಿಯ ಅಧ್ಯಕ್ಷರಾದ ಹಾಗೂ ಬೆಳ್ತಂಗಡಿ ತಾಲೂಕು ಮಹಿಳಾ ಸಹಕಾರಿ ಸಂಘದ ಸಿಇಒ ಸ್ವರ್ಣಗೌರಿ ಮಾತನಾಡಿ, ಟೈಲರಿಂಗ್ ಕಲಿಕೆ ಅನೇಕ ಉದ್ಯೋಗದ ಅವಕಾಶಗಳನ್ನು ಒದಗಿಸಬಲ್ಲದು. "ದೀಪಜ್ಯೋತಿ ಹೇಗೆ ಬೆಳಗುತ್ತದೋ, ಹಾಗೆಯೇ ನೀವು ಈ ವಿದ್ಯೆಯನ್ನು ಉಪಯೋಗಿಸಿ ಸಮಾಜದಲ್ಲಿ ಬೆಳಗಬೇಕು"ಎಂದು ಶುಭಹಾರೈಸಿದರು. ಅರಸಿನಮಕ್ಕಿ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ಗಾಯತ್ರಿ, ಅರಸಿನಮಕ್ಕಿ ಶಿವಾನಿ ಸಂಜೀವಿನಿ ಮಹಿಳಾ ಒಕ್ಕೂಟ ಅಧ್ಯಕ್ಷರಾದ ಶ್ರೀಮತಿ ಪ್ರತಿಮಾ, ನೇಲ್ಯಡ್ಕ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕರಾದ ಶ್ರೀಮತಿ ವಸಂತಿ ಕೆ., ಕನ್ಯಾಡಿ ಶ್ರೀ ದುರ್ಗಾ ಮಾತೃಮಂಡಳಿ ಖಜಾಂಚಿ ಶ್ರೀಮತಿ ಬಬಿತಾ, ಟೈಲರಿಂಗ್ ತರಬೇತುದಾರರು ಶ್ರೀಮತಿ ಹರಿಣಾಕ್ಷಿ ಬಿ.ಪಿ, ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ನೇಲ್ಯಡ್ಕ ಶಾಲಾ ಅಭಿವೃದ್ಧಿ ಸಮಿತಿ ಅಧ್ಯಕ್ಷರಾದ ಶ್ರೀಮತಿ ಭವಾನಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶಿಬಿರದಲ್ಲಿ ಒಟ್ಟು 27 ಮಂದಿ ಮಹಿಳಾ ಶಿಬಿರಾರ್ಥಿಗಳು ಭಾಗವಹಿಸಿದ್ದು, ಮಹಿಳಾ ಸಬಲೀಕರಣದತ್ತ ಮತ್ತೊಂದು ಮಹತ್ವದ ಹೆಜ್ಜೆಯಾಗಿದೆ. ಕೃಷಿ ಉದ್ಯೋಗ ಸಖಿ ಗೀತಾ, ಪಶುಸಖಿ ವೇದಾವತಿ, ಸ್ಥಳೀಯ ಸಂಪನ್ಮೂಲ ವ್ಯಕ್ತಿ ಅಮಿತ ಪ್ರಾರ್ಥನೆಯನ್ನು ಮಾಡಿ, ಕಾರ್ಯಕ್ರಮದಲ್ಲಿ ಮುಖ್ಯ ಪುಸ್ತಕ ಬರಹಗಾರರು ಶ್ರೀಮತಿ ನೀತಾ ಸ್ವಾಗತಿಸಿ, ಸೇವಾಭಾರತಿಯ ಡಾಕ್ಯುಮೆಂಟೇಶನ್, ಮೋನಿಟರಿಂಗ್ ಮತ್ತು ಇವಾಲ್ಯೂವೇಟಿಂಗ್ ಕೋ – ಆರ್ಡಿನೇಟರ್ ಸುಮ ನಿರೂಪಿಸಿ. ಸ್ಥಳೀಯ ಸಂಪನ್ಮೂಲ ವ್ಯಕ್ತಿ ಶ್ರೀಮತಿ ಹೇಮಲತಾ ಧನ್ಯವಾದವಿತ್ತರು.

# ಸೇವಾಭಾರತಿಗೆ ಸಿ.ಆರ್. 3 (ಇಂಡಿಯಾ) ಪ್ರೈವೇಟ್ ಲಿಮಿಟೆಡ್ ಕಂಪೆನಿಯಿಂದ ರೂ. 5 ಲಕ್ಷ ದೇಣಿಗೆ



**ಕನ್ಯಾಡಿ (ಏ. 05):** ಮಂಗಳೂರು ಸಿ.ಆರ್. 3 (ಇಂಡಿಯಾ) ಪ್ರೈವೇಟ್ ಲಿಮಿಟೆಡ್‌ನ ಸೀನಿಯರ್ ಎಕ್ಸಿಕ್ಯೂಟಿವ್ ಶ್ರೀ ಗಣೇಶ ಟಿ. ಸೇವಾನಿಕೇತನಕ್ಕೆ ಭೇಟಿ ನೀಡಿ, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಪುನಶ್ಚೇತನ ಕೇಂದ್ರದ ನೂತನ ಕಟ್ಟಡ ನಿರ್ಮಾಣಕ್ಕಾಗಿ ಕಂಪೆನಿಯಿಂದ ರೂ. 5,00,000/– ದ ಚೆಕ್ ನೀಡಿ ಕಟ್ಟಡದ ನಿರ್ಮಾಣ ಶೀಘ್ರ ನೆರವೇರುವಂತೆ ಶುಭಹಾರೈಸಿದರು.

ಸೇವಾಧಾಮ ಸಂಸ್ಥೆಯ ಸಂಚಾಲಕರಾದ ಶ್ರೀ ಕೆ. ಪುರಂದರ ರಾವ್ ಮತ್ತು ಸೇವಾಭಾರತಿ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಸ್ವರ್ಣಗೌರಿ ಇದನ್ನು ಸಿಬ್ಬಂದಿಯೊಂದಿಗೆ ಸ್ವೀಕರಿಸಿ ಸಂಸ್ಥೆಯ ಪರವಾಗಿ ಧನ್ಯವಾದವಿತ್ತರು.

# ಸೇವಾಭಾರತಿ ತಂಡದಿಂದ ರಾಜ್ಯಸಭಾ ಸದಸ್ಯರಾದ ಡಾ. ಡಿ.ವಿ. ಹೆಗ್ಗಡೆ ಭೇಟಿ



**ಧರ್ಮಸ್ಥಳ (ಏ. 22):** ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿಗಳು ಮತ್ತು ಭಾರತ ಸರ್ಕಾರದ ರಾಜ್ಯಸಭಾ ಸದಸ್ಯರಾದ ಡಾ. ಡಿ.ವೀರೇಂದ್ರ ಹೆಗ್ಗಡೆಯವರನ್ನು ಏಪ್ರಿಲ್ 22 ರಂದು ಭೇಟಿ ಮಾಡಿ ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಿಸುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡದ ವರದಿಯನ್ನು ಸಲ್ಲಿಸಿ ಮನವಿಯನ್ನು ಮಾಡಲಾಯಿತು. ಕಟ್ಟಡ ನಿರ್ಮಾಣ ಶೀಘ್ರವಾಗಿ ನೆರವೇರುವಂತೆ ಶುಭಹಾರೈಸಿದರು.

ಸೇವಾಧಾಮ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ.ವಿನಾಯಕ ರಾವ್, ಸೇವಾಭಾರತಿ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಸ್ವರ್ಣಗೌರಿ, ಕಾರ್ಯದರ್ಶಿ ಶ್ರೀ ಬಾಲಕೃಷ್ಣ, ಸೇವಾಭಾರತಿಯ ಹಿರಿಯ ಪ್ರಬಂಧಕರಾದ ಶ್ರೀ ಚರಣ್ ಕುಮಾರ್ ಎಂ. ಫಂಡ್ ರೈಸಿಂಗ್ ಮತ್ತು ಮಾರ್ಕೆಟಿಂಗ್ ಮ್ಯಾನೇಜರ್ ಶ್ರೀ ಆಶ್ರಿತ್ ಸಿ.ಪಿ. ಉಪಸ್ಥಿತರಿದ್ದರು.

# ಸೇವಾಧಾಮದಲ್ಲಿ ಹುಟ್ಟುಹಬ್ಬ ಆಚರಣೆ

**ಸೌತಡ್ಕ (ಏ.25):** ಸೇವಾಭಾರತಿ ಸಂಸ್ಥೆಯ ಟ್ರಸ್ಟಿ ಶ್ರೀ ಕೆ. ಜಯರಾಜ್ ಸಾಲ್ಯಾನ್ ಕಾನರ್ಪ ಅವರ ಪುತ್ರಿ ಭಾವನ ಅವರ ಹುಟ್ಟುಹಬ್ಬವನ್ನು ಸೌತಡ್ಕದ ಸೇವಾಧಾಮ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರದಲ್ಲಿ ಸನಿವಾಸಿಗಳಿಗೆ ಮತ್ತು ಆರೈಕೆದಾರರಿಗೆ ಒಂದು ಹೊತ್ತಿನ ಊಟವನ್ನು ನೀಡುವುದರೊಂದಿಗೆ ಏಪ್ರಿಲ್ 25 ರಂದು ಸಮಾಜಕ್ಕೆ ಮಾದರಿಯಾಗುವಂತೆ ಹುಟ್ಟುಹಬ್ಬ ಆಚರಿಸಿಕೊಂಡರು.

ಬೇಬಿ. ಭಾವನ ಜಯರಾಜ್ ಕಾನರ್ಪ ಇವರಿಗೆ ಸಂಸ್ಥೆಯ ಪರವಾಗಿ ಶುಭ ಹಾರೈಸಲಾಯಿತು. ಈ ಸಂದರ್ಭದಲ್ಲಿ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.




# ಸೇವಾಭಾರತಿ ನೂತನ ಕಟ್ಟಡ ನಿರ್ಮಾಣಕ್ಕೆ ಸೇವ್ ಲೈಫ್ ಚಾರಿಟೇಬಲ್ ಟ್ರಸ್ಟ್‌ನಿಂದ 281 ಬ್ಯಾಗ್ ಸಿಮೆಂಟ್‌ಗೆ ರೂ. 1 ಲಕ್ಷ ದೇಣಿಗೆ



**ಮಂಗಳೂರು (ಏ. 12):** ಮಂಗಳೂರು ಸೇವ್ ಲೈಫ್ ಚಾರಿಟೇಬಲ್ ಟ್ರಸ್ಟ್ ಸಂಸ್ಥಾಪಕರಾದ ಶ್ರೀ ಅರ್ಜುನ್ ಭಂಡಾರ್ಕರ್‌ರವರು ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಿಸುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ 281 ಬ್ಯಾಗ್ ಸಿಮೆಂಟ್‌ಗೆ ರೂ. 1,00,000/–ದ ಚೆಕ್ ನೀಡಿ ಸಹಕರಿಸಿದ್ದಾರೆ.

ಈ ಸಂಸ್ಥೆಯು ಈಗಾಗಲೇ ದಕ್ಷಿಣಕನ್ನಡದಾದ್ಯಂತ ಅನೇಕ ಅಸಹಾಯಕರಿಗೆ, ಅಶಕ್ತರಿಗೆ ಮತ್ತು ದುರ್ಬಲರಿಗೆ ಬೇಕಾದ ವೈದ್ಯಕೀಯ ವೆಚ್ಚವನ್ನು ನೀಡಿ ಅವರ ನೋವಿಗೆ ಸ್ಪಂದಿಸಿ ಅವರ ಬಾಳಲ್ಲಿ ಆಶಾಕಿರಣವಾಗಿದೆ.

ಸೇವಾಧಾಮ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ.ವಿನಾಯಕ ರಾವ್ ಮತ್ತು ಸೇವಾಭಾರತಿಯ ಹಿರಿಯ ಪ್ರಬಂಧಕರಾದ ಶ್ರೀ ಚರಣ್ ಕುಮಾರ್ ಎಂ. ಇದನ್ನು ಸ್ವೀಕರಿಸಿ ಸಂಸ್ಥೆಯ ಪರವಾಗಿ ಧನ್ಯವಾದವಿತ್ತರು.

## ಸೇವಾಭಾರತಿ ನೂತನ ಕಟ್ಟಡ ನಿರ್ಮಾಣಕ್ಕೆ ಶ್ರೀಮತಿ ವಸಂತಿ ಗೌಡ ಇವರಿಂದ ದೇಣಿಗೆ



**ಉಜಿರೆ (ಏ. 21):** ದುರ್ಗಾ ಮಾತೃ ಮಂಡಳಿಯಲ್ಲಿ ಹಾಗೂ ಸೇವಾಭಾರತಿಯಲ್ಲಿ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸುತ್ತಿರುವ ಶ್ರೀಮತಿ ವಸಂತಿ ಗೌಡ ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತ–ಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಿಸುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ. ಸೇವಾಭಾರತಿ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಸ್ವರ್ಣಗೌರಿ ಇದನ್ನು ಸ್ವೀಕರಿಸಿ ಸಂಸ್ಥೆಯ ಪರವಾಗಿ ಧನ್ಯವಾದವಿತ್ತರು.

## ಸೇವಾಭಾರತಿ ನೂತನ ಕಟ್ಟಡ ನಿರ್ಮಾಣಕ್ಕೆ ಶ್ರೀಮತಿ ರೋಹಿಣಿ ಅಚ್ಯುತ ಗೌಡ ಇವರಿಂದ ದೇಣಿಗೆ



**ಕನ್ಯಾಡಿ (ಏ. 25):** ಧರ್ಮಸ್ಥಳದ ಶ್ರೀಮತಿ ರೋಹಿಣಿ ಅಚ್ಯುತ ಗೌಡ ಹಾಗೂ ಕುಟುಂಬಸ್ಥರು ಏಪ್ರಿಲ್ 25 ರಂದು ಕನ್ಯಾಡಿ ಸೇವಾನಿಕೇತನಕ್ಕೆ ಭೇಟಿ ನೀಡಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಿಸುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ ರೂ. 50,000/– ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಸೇವಾಭಾರತಿ ಸಂಸ್ಥೆಯ ಫಂಡ್ ರೈಸಿಂಗ್ ಮತ್ತು ಮಾರ್ಕೆಟಿಂಗ್ ಮ್ಯಾನೇಜರ್ ಶ್ರೀ ಆಶ್ರಿತ್ ಸಿ.ಪಿ. ಇದನ್ನು ಸ್ವೀಕರಿಸಿ ಸಂಸ್ಥೆಯ ಪರವಾಗಿ ಧನ್ಯವಾದವಿತ್ತರು.

## ವಿಶೇಷ ರೀತಿಯಲ್ಲಿ ಹುಟ್ಟುಹಬ್ಬವನ್ನು ಆಚರಿಸಿಕೊಂಡ ಶ್ರೀ ರಾಜೇಂದ್ರ ಅಜ್ರಿ



**ಕನ್ಯಾಡಿ(ಏ.19) :** ಕನ್ಯಾಡಿ ಸೇವಾನಿಕೇತನಕ್ಕೆ ಶ್ರೀ ರಾಜೇಂದ್ರ ಅಜ್ರಿ ಏಪ್ರಿಲ್ 19 ರಂದು ಭೇಟಿನೀಡಿ ತನ್ನ ಹುಟ್ಟುಹಬ್ಬದ ಜೊತೆಗೆ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗಾಗಿ ಸೇವಾಧಾಮ ಮಾಡುವ ಕಾರ್ಯಚಟುವಟಿಕೆಗಳಿಗೆ ರೂ. 15,000 ಮೊತ್ತವನ್ನು ನೀಡಿ ತನ್ನ ಹುಟ್ಟುಹಬ್ಬವನ್ನು ವಿಶೇಷ ರೀತಿಯಲ್ಲಿ ಆಚರಿಸಿಕೊಂಡಿದ್ದಾರೆ.

ಸೇವಾಭಾರತಿ ಸಂಸ್ಥೆಯ ಫಂಡ್ ರೈಸಿಂಗ್ ಮತ್ತು ಮಾರ್ಕೆಟಿಂಗ್ ಮ್ಯಾನೇಜರ್ ಶ್ರೀ ಆಶ್ರಿತ್ ಸಿ.ಪಿ. ಇದನ್ನು ಸ್ವೀಕರಿಸಿ ಸಂಸ್ಥೆಯ ಪರವಾಗಿ ಶುಭಹಾರೈಸಿ, ಧನ್ಯವಾದವಿತ್ತರು.

## ಸೇವಾಭಾರತಿ ನೂತನ ಕಟ್ಟಡ ನಿರ್ಮಾಣಕ್ಕೆ ಬೆಂಗಳೂರಿನ ರಮಣಶ್ರೀ ಗ್ರೂಪ್‌ನಿಂದ ರೂ. 10,000 ದೇಣಿಗೆ



**ಬೆಂಗಳೂರು (ಏ. 24):** ಬೆಂಗಳೂರಿನ ರಮಣಶ್ರೀ ಗ್ರೂಪ್‌ನ ಅಧ್ಯಕ್ಷರಾದ ಶ್ರೀ ಎಸ್ ಶದಾಕ್ಷರಿ ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಪುನಶ್ಚೇತನ ಕೇಂದ್ರದ ನೂತನ ಕಟ್ಟಡ ನಿರ್ಮಾಣಕ್ಕಾಗಿ ರೂ. 10,000/– ದೇಣಿಗೆಯನ್ನು ನೀಡಿ ಕಟ್ಟಡದ ನಿರ್ಮಾಣ ಶೀಘ್ರ ನೆರವೇರುವಂತೆ ಶುಭಹಾರೈಸಿದರು. ಸೇವಾಧಾಮ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ.ವಿನಾಯಕ ರಾವ್, ಹಿರಿಯ ಪ್ರಬಂಧಕರಾದ ಶ್ರೀ ಚರಣ್ ಕುಮಾರ್ ಎಂ. ಇದನ್ನು ಸ್ವೀಕರಿಸಿ ಸಂಸ್ಥೆಯ ಪರವಾಗಿ ಧನ್ಯವಾದವಿತ್ತರು.

## ಸೇವಾಭಾರತಿ ನೂತನ ಕಟ್ಟಡ ನಿರ್ಮಾಣಕ್ಕೆ ಶ್ರೀಮತಿ ವಿನಯ ಶೆಂಡ್ಯೆ ಇವರಿಂದ ರೂ. 10,000 ದೇಣಿಗೆ



**(ಸೌತಡ್ಕ: ಏ. 19)** ಕೊಕ್ಕಡದಲ್ಲಿ ನಡೆದ 29ನೇ ಟೈಲರಿಂಗ್ ಶಿಬಿರದ ತರಬೇತುದಾರರಾದ ಶ್ರೀಮತಿ ವಿನಯ ಶೆಂಡ್ಯೆ ಹಾಗೂ ಕುಟುಂಬಸ್ಥರು ಸೌತಡ್ಕ, ಸೇವಾಧಾಮ, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರಕ್ಕೆ ಏಪ್ರಿಲ್ 19 ರಂದು ಭೇಟಿನೀಡಿ, ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಿಸುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ ಶ್ರೀಮತಿ ವಿನಯ ಶೆಂಡ್ಯೆ ರೂ. 1,000 ಮೊತ್ತವನ್ನು ನೀಡಿ ಸಹಕರಿಸಿದ್ದಾರೆ.

## ಸೇವಾಭಾರತಿ ನೂತನ ಕಟ್ಟಡ ನಿರ್ಮಾಣಕ್ಕೆ 31ನೇ ಉಚಿತ ಟೈಲರಿಂಗ್ ತರಬೇತಿ ಶಿಬಿರದ ಶಿಬಿರಾರ್ಥಿಗಳಿಂದ ರೂ. 3,350 ದೇಣಿಗೆ



**ಹತ್ಯಡ್ಕ (ಏ. 20):** ಅರಸಿನಮಕ್ಕಿಯಲ್ಲಿ ನಡೆದ 31ನೇ ಉಚಿತ ಟೈಲರಿಂಗ್ ಶಿಬಿರದ ಸಮಾರೋಪ ಸಮಾರಂಭದ ವೇಳೆ ತರಬೇತುದಾರರಾದ ಶ್ರೀಮತಿ ರೇಷ್ಮಾ ಜಯಪ್ರಸಾದ್ ಶೆಟ್ಟಿಗಾರ್, ಅರಿಕೆಗುಡ್ಡೆ ಶ್ರೀ ವನದುರ್ಗ ದೇವಸ್ಥಾನದ ಮಹಿಳಾ ಕಾರ್ಯದರ್ಶಿ ಶ್ರೀಮತಿ ನೀತಾ ರಾಧೇಶ್ ಆಚಾರ್ಯ ಮತ್ತು 29 ಮಂದಿ ಶಿಬಿರಾರ್ಥಿಗಳು ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಿಸುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ ರೂ. 3,350 ಮೊತ್ತವನ್ನು ನೀಡಿ ಸಹಕರಿಸಿದ್ದಾರೆ.


## ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಫಲಾನುಭವಿಗಳಿಗೆ ವೈದ್ಯರಿಂದ ಸಮಾಲೋಚನೆ





ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಪ್ರತಿ ತಿಂಗಳು ಫಲಾನುಭವಿಗಳಿಗೆ ನಡೆಸುವಂತಹ ವೈದ್ಯರ ಸಮಾಲೋಚನೆಯಲ್ಲಿ ಏಪ್ರಿಲ್ ತಿಂಗಳಿನಂದು ಮಂಗಳೂರು ಕೆಎಂಸಿ ಆಸ್ಪತ್ರೆಯ ಸ್ಪೈನ್ ಶಸ್ತ್ರಚಿಕಿತ್ಸಕರು ಡಾ। ವೈಶಾಕ್ ಭಟ್ ಸೇವಾಧಾಮಕ್ಕೆ ಭೇಟಿ ನೀಡಿದ್ದರು. ಫಲಾನುಭವಿಗಳನ್ನು ಪರೀಕ್ಷೆ ಮಾಡಿ ಅವರ ಆರೋಗ್ಯದ ಬಗ್ಗೆ ಮಾಹಿತಿಯನ್ನು ನೀಡಿದರು. ಈ ಸಮಾಲೋಚನೆಯಲ್ಲಿ 8 ಮಂದಿ ಫಲಾನುಭವಿಗಳು ಭಾಗವಹಿಸಿದ್ದರು.

## ವಿಶೇಷ ರೀತಿಯಲ್ಲಿ ಹುಟ್ಟುಹಬ್ಬವನ್ನು ಆಚರಿಸಿಕೊಂಡ ಶ್ರೀ ಗೌರವ್ ಸ್ವರೂಪ್




**ಸೌತಡ್ಕ (ಏ. 29):** ಸೇವಾಧಾಮ ಬೆನ್ನುಹುರಿ ಅಪಘಾತಕ್ಕೊಳಗಾದ ಪುನಶ್ಚೇತನ ಕೇಂದ್ರಕ್ಕೆ ಕಾಶಿಬೆಟ್ಟುವಿನ ಶ್ರೀ ರಮೇಶ್ ಪಯಿಲಾರ್ ಹಾಗೂ ಕುಟುಂಬಸ್ಥರು ಏಪ್ರಿಲ್ 29 ರಂದು ಭೇಟಿ ನೀಡಿ ತನ್ನ ಮಗ ಶ್ರೀ ಗೌರವ್ ಸ್ವರೂಪ್ ಅವರ ಹುಟ್ಟುಹಬ್ಬದ ಜೊತೆಗೆ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗಾಗಿ ಸೇವಾಧಾಮ ಮಾಡುವ ಕಾರ್ಯಚಟುವಟಿಕೆಗಳಿಗೆ ರೂ. 5,000 ಮೊತ್ತವನ್ನು ನೀಡಿ ತನ್ನ ಹುಟ್ಟು ಹಬ್ಬವನ್ನು ವಿಶೇಷ ರೀತಿಯಲ್ಲಿ ಆಚರಿಸಿಕೊಂಡಿದ್ದಾರೆ.

ಸೇವಾಧಾಮ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ಮತ್ತು ಸೇವಾಭಾರತಿ ಟ್ರಸ್ಟಿ ಶ್ರೀ ಜಯರಾಜ್ ಸಾಲಿಯಾನ್ ಕಾನರ್ಪ ಸಂಸ್ಥೆಯ ಪರವಾಗಿ ದೇಣಿಗೆ ಸ್ವೀಕರಿಸಿ ಶುಭಹಾರೈಸಿದರು.

# ಸೇವಾಧಾಮದಲ್ಲಿ ಪುನಶ್ಚೇತನಗೊಂಡ ಸನಿವಾಸಿಗಳ ಅನಿಸಿಕೆ

ಪವನ್ ಬಿ. ಆದ ನಾನು ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು ತಾಲೂಕಿನ ಭಕ್ತರಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದು ನಾನು ಚಿಕ್ಕಮಗಳೂರು ಕಾಲೇಜಿನಲ್ಲಿ ಪ್ರಥಮ ಪಿಯುಸಿ ಓದುತ್ತಿದ್ದೆ. ಎಂದಿನಂತೆ ದಿನಾಂಕ 02/02/ 2024 ರಂದು ಕಾಲೇಜಿಗೆ ಹೋಗಿ ಸಂಜೆ 5 ಕ್ಕೇ ನನ್ನ ಮನೆಗೆ ಸ್ಕೂಟಿಯಲ್ಲಿ ಹೋಗುತ್ತಿರುವಾಗ ನನ್ನ ಹಿಂದೆ ಒಂದು ವೇಗವಾಗಿ ಬೈಕ್ ಬಂತು. ನನಗೆ ಭಯವಾಗಿ ಹಿಂದೆ ತಿರುಗಿ ನೋಡುವಷ್ಟರಲ್ಲಿ ನನಗೆ ಸ್ಕೂಟಿ ಬ್ಯಾಲೆನ್ಸ್ ತಪ್ಪಿ ಪಕ್ಕದ ಚರಂಡಿಯಲ್ಲಿ ಬಿದ್ದಿದ್ದೆ. ಪ್ರಜ್ಞೆ ತಪ್ಪಿ ಅಲ್ಲಿ ಏನು ನಡೆದಿತ್ತು ಎಂದು ಗೊತ್ತೇ ಆಗಲಿಲ್ಲ. ಅಲ್ಲಿಂದ ನನ್ನನ್ನು ಚಿಕ್ಕಮಗಳೂರು ಖಾಸಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂಆರ್ಐ ಸ್ಕ್ಯಾನ್ ಮಾಡಿ ಬೆನ್ನುಮೂಳೆಗೆ ಪೆಟ್ಟಾದ ಕಾರಣ ಸರ್ಜರಿ ಮಾಡಬೇಕೆಂದು ಮಂಗಳೂರಿಗೆ ಕಳುಹಿಸಿದರು. ನಂತರ ನಾನು ಫಾದರ್ ಮುಲ್ಲರ್ ಆಸ್ಪತ್ರೆಗೆ ಬೆಳಗಿನ ಜಾವ 4 ಗಂಟೆಗೆ ಬಂದು ತಲುಪಿದೆವು. ಅಲ್ಲಿ ಕೂಡ ಎಲ್ಲಾ ಪರೀಕ್ಷೆಗಳನ್ನು ಮಾಡಿ ನನಗೆ ದಿನಾಂಕ 03/02/2024 ಮಧ್ಯಾಹ್ನ 3 ಗಂಟೆಗೆ ಸರ್ಜರಿ ಮಾಡಿದರು. ನನಗೆ T4 - T5 ಲೆವೆಲ್ ಸರ್ಜರಿ ಆಗಿದೆ. ಇನ್ನು ಮುಂದೆ ಎದೆಯ ಭಾಗದಿಂದ ಪಾದದವರೆಗೂ ಸ್ಪರ್ಶ ಇರುವುದಿಲ್ಲ ಎಂಬ ವಿಷಯ ತಿಳಿಸಿದರು. ನಾನು 25 ದಿನಗಳವರೆಗೂ ಆಸ್ಪತ್ರೆಯಲ್ಲಿ ಇದ್ದು ನಂತರ ಮನೆಗೆ ಬಂದೆವು. ಮನೆಯಲ್ಲಿ ನನ್ನ ಎಲ್ಲ ದಿನನಿತ್ಯದ ಕೆಲಸಗಳನ್ನು ನನ್ನ ಆರೈಕೆಯನ್ನು ನನ್ನ ಅಪ್ಪ ಅಮ್ಮ ಮಾಡುತ್ತಿದ್ದರು. ನನಗೆ ಎದ್ದು ಕೂರಲು ಕೂಡ ಆಗುತ್ತಿರಲಿಲ್ಲ. ನಂತರ ನಮಗೆ ಸೇವಾಧಾಮದ ಬಗ್ಗೆ ಏಳು ತಿಂಗಳ ನಂತರ ತಿಳಿದು ನಾವು ದಿನಾಂಕ 21/ 9/ 2024 ರಂದು ಸೇವಾಧಾಮಕ್ಕೆ ಬಂದೆವು. ಇಲ್ಲಿ ನಾನು ಮೇಲೆ ಏಳುವುದು, ವೀಲ್‌ಚೇರ್‌ಗೆ ಕೂರುವುದು, ಸಿಐಸಿ ಮಾಡುವುದು, ಡಿಎಸ್ ಮಾಡುವುದು, ಸ್ನಾನ ಮಾಡುವುದು, ಜೊತೆಗೆ ಯೋಗ ಏರೋಬಿಕ್ಸ್, ಎಕ್ಸೈಜ್ ವಿಧ –ವಿಧವಾದ ವ್ಯಾಯಮಗಳನ್ನು ನನ್ನಿಂದ ಮಾಡಿಸಿದರು. ನನ್ನನ್ನು ಈ ಮೂರು ತಿಂಗಳಲ್ಲಿ ವಾಕರ್‌ನಲ್ಲಿ ನಡೆಯುವ ಮಟ್ಟಕ್ಕೆ ನನ್ನಲ್ಲಿ ಬದಲಾವಣೆ ತಂದರು. ನಾನು ತುಂಬಾ ಚೇತರಿಸಿಕೊಂಡೆ. ನನ್ನ ಈ ಬದಲಾವಣೆಗೆ ಗಣೇಶ್ ಸರ್, ಕೃತಿಕಾ ಮೇಡಂ ಹಾಗೂ ವಿರೂಪಾಕ್ಷ ಸರ್ ಅಕ್ಷತಾ ಮೇಡಂ ಎಲ್ಲರೂ ತುಂಬಾ ಕಷ್ಟಪಟ್ಟಿದ್ದಾರೆ. ನಾನು ಸೇವಾಧಾಮದ ಎಲ್ಲಾ ಸಿಬ್ಬಂದಿಗಳಿಗೂ ನನ್ನ ಬದುಕು ಬದಲಿಸಿದ ಸೇವಾಧಾಮಕ್ಕೂ ಸದಾ ಚಿರಋಣಿಯಾಗಿರುತ್ತೇನೆ. ಜೊತೆಗೆ ವಿನಾಯಕ ಸರ್‌ಗೆ ನನ್ನ ತುಂಬುಹೃದಯದ ಧನ್ಯವಾದಗಳು.

ಇತಿ ನಿಮ್ಮ ವಿಶ್ವಾಸಿ

**ಪವನ್ ಬಿ.ಆರ್,**

ಚಿಕ್ಕಮಗಳೂರು

# ಸೇವಾಭಾರತಿಯ ವಿಶ್ವಸ್ಥಮಂಡಳಿಗೆ ನೂತನ ಸಲಹಾಮಂಡಳಿಯ ಸದಸ್ಯರು

## ಆದಿತ್ಯ ಕಲ್ಲೂರಾಯ



ಇವರು ಮೂಲತಃ ಸುಳ್ಯ ತಾಲೂಕಿನ ಕಾವು, ಅಂಚಿನಡ್ಕ ನಿವಾಸಿ. ಆದಿತ್ಯ ಇವರು ಒಬ್ಬ ಭರತನಾಟ್ಯ ಕಲಾವಿದರಾಗಿದ್ದರು, ನಾಟ್ಯಗುರು ಬಾಲಕೃಷ್ಣ ಮಾಸ್ಟರ್ ಮಂಜೇಶ್ವರ ಅವರಿಂದ 12 ವರ್ಷಗಳ ಕಾಲ ತರಬೇತಿ ಪಡೆಡಿದ್ದಾರೆ. ಕರ್ನಾಟಕ ಮತ್ತು ನೆರೆಯ ರಾಜ್ಯಗಳಲ್ಲಿ 85 ಕ್ಕೂ ಹೆಚ್ಚು ನೃತ್ಯ ಕಾರ್ಯಕ್ರಮಗಳಲ್ಲಿ ಪ್ರದರ್ಶನ ನೀಡಿದ ಹೆಗ್ಗಳಿಕೆ ಇವರದ್ದಾಗಿದೆ. ವಿವೇಕಾನಂದ ಕಾಲೇಜಿನಲ್ಲಿ ಇಂಜಿನಿಯರಿಂಗ್ ಮಾಡಿದ್ದಾರೆ. 2012ರ ಯುಇಎಸ್ ಪರೀಕ್ಷೆಯಲ್ಲಿ ವಾಯುಪಡೆಗೆ ಕಮಿಷನ್ ಆಫೀಸರ್ ಆಗಿ ಆಯ್ಕೆಯಾದ ಕರ್ನಾಟಕದ ಏಕೈಕ ಅಭ್ಯರ್ಥಿಯು ಸಹ ಹೌದು, 2012 ಮೇ 19 ರಂದು ಫೈನಲ್ ಇಯರ್ ಓದುವ ಸಮಯದಲ್ಲಿ ರಸ್ತೆ ಅಪಘಾತದಲ್ಲಿ ಬೆನ್ನುಹುರಿ ಅಪಘಾತಕ್ಕೆ ಒಳಗಾದರು. ಸವಾಲಿನ ಚೇತರಿಕೆಯ ಅವಧಿಯಲ್ಲಿ, ಅವರು ಹಾಸಿಗೆ ಹಿಡಿದಿರುವಾಗ ಸಾಫ್ಟ್‌ವೇರ್ ಡೆವಲಪ್‌ಮೆಂಟ್ ಮತ್ತು ಇತರ ವಿಷಯಗಳಲ್ಲಿ ಸ್ವಯಂ ಶಿಕ್ಷಣದತ್ತ ಗಮನಹರಿಸಿದರು. ಪುತ್ತೂರಿನಲ್ಲಿ ತಮ್ಮ ಕಾಲೇಜು ಸ್ನೇಹಿತ ಶರತ್ ಶ್ರೀನಿವಾಸ್ ಅವರೊಂದಿಗೆ ದಿ ವೆಬ್ ಪೀಪಲ್ ಎಂಬ ಐಟಿ ಕಂಪನಿಯನ್ನು ಪ್ರಾರಂಭ ಮಾಡಿದರು. ಡಿಜಿಟಲ್ ಮೀಡಿಯಾ ಕಂಪನಿಯಾದ ರೀಡೂ ಮೀಡಿಯಾ ಪ್ರೈವೇಟ್ ಲಿಮಿಟೆಡ್ ಮತ್ತು ಆನ್‌ಲೈನ್ ಕರ್ನಾಟಕ ಸಂಗೀತ ಅಕಾಡೆಮಿಯಾದ ಆರಭಿ ಅನ್ನು ಸ್ಥಾಪಿಸುವ ಮೂಲಕ ಅವರು ತಮ್ಮ ವ್ಯವಹಾರ ಉದ್ಯಮಗಳನ್ನು ಮತ್ತಷ್ಟು ವಿಸ್ತರಿಸಿದರು. ದಿ ವೆಬ್ ಪೀಪಲ್ ಐಟಿ ಕಂಪನಿಯಲ್ಲಿ ಸಿಇಒ ಆಗಿ 7 ವರ್ಷದಲ್ಲಿ ಸರಿಸುಮಾರು 200ಕ್ಕೂ ಹೆಚ್ಚು ಕಂಪನಿಗಳ ಕೆಲಸವನ್ನು ಮಾಡಿ ಇದೀಗ 30 ಜನಕ್ಕೆ ತಾವೇ ಕೆಲಸವನ್ನು ನೀಡುತ್ತಾ ಅಷ್ಟು ಮಂದಿಯ ಬಾಳಿಗೆ ಬೆಳಕಾಗಿ ಕಂಪೆನಿಯನ್ನು ಮುನ್ನಡೆಸುತ್ತಿದ್ದಾರೆ.

## ಕಿರಣ್‌ರಾಜ್ ಕೆ. ಉಜಿರೆ



ಇವರು ಮೂಲತಃ ಉಜಿರೆ, ಅತ್ತಾಜೆಯ ನಿವಾಸಿಯಾಗಿದ್ದು. ಉಜಿರೆ, ಜನಾರ್ಧನ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸಿದರು ಮತ್ತು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನಲ್ಲಿ ಎಂಎಸ್ ಡಬ್ಲ್ಯೂ ಮುಗಿಸಿ ಶ್ರೀ ಧರ್ಮಸ್ಥಳ ಎಜುಕೇಶನಲ್ ಸೊಸೈಟಿಯಲ್ಲಿ ಅಸಿಸ್ಟೆಂಟ್ ಆಗಿ 5 ವರ್ಷ ಕೆಲಸ ಮಾಡಿದ್ದಾರೆ. ಹಾಗೆಯೇ ಸೇವಾಭಾರತಿ ವತಿಯಿಂದ ಉಜಿರೆಯ ಶಾರದಾ ಮಂಟಪದಲ್ಲಿ ನಡೆದಂತಹ ರಕ್ತದಾನ ಶಿಬಿರದಲ್ಲಿ ಸ್ವಯಂಸೇವಕರಾಗಿ ಕಾರ್ಯನಿರ್ವಹಿಸಿ ಅನೇಕ ಕೆಲಸದ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದರು. ಇದರ ಜೊತೆಗೆ ಬೇರೆಬೇರೆ ಸಂಘಸಂಸ್ಥೆಗಳನ್ನು ಒಟ್ಟುಗೂಡಿಸಿಕೊಂಡು ಶಿಬಿರವನ್ನು ನಡೆಸುತ್ತಿದ್ದರು. ವಿಶ್ವ ಹಿಂದೂ ಪರಿಷತ್, ಬಜರಂಗದಳ ಹೀಗೆ ಹಲವಾರು ಸಂಘಸಂಸ್ಥೆಗಳಲ್ಲಿ ಕೆಲಸವನ್ನು ಮಾಡುತ್ತ ಬಂದಿದ್ದಾರೆ. ಪಟ್ರೂರು, ಮುಂಡಾಜೆ, ಸುಲ್ಕೇರಿ ಶಾಲೆಗಳ ಅಭಿವೃದ್ಧಿಗಳಿಗೆ ದಾನಿಗಳಿಂದ ಸಹಾಯ ಮಾಡುವ ಹಾಗೆ ಧನಸಹಾಯವನ್ನು ಮಾಡುವುದರ ಮೂಲಕ ಶ್ರಮಿಸಿದ್ದಾರೆ. ಪ್ರಸ್ತುತ ಇದೀಗ ಕಳೆದ 5 ವರ್ಷದಿಂದ MLC ಪ್ರತಾಪ್ ಸಿಂಹ ನಾಯಕ್‌ರವರ ಆಪ್ತ ಸಹಾಯಕರಾಗಿ ಕೆಲಸವನ್ನು ನಿರ್ವಹಿಸುತ್ತಿದ್ದಾರೆ.

# ರಿಯಾಯಿತಿ ದರದಲ್ಲಿ ಗಾಲಿಕುರ್ಚಿ ವಿತರಣೆ



ಶ್ರೀ ಜೀವನ್ ವಿನೋದ್ ಡಿಸೋಜಾ, ಮಂಗಳೂರು



ಶ್ರೀ ರಾಧಾಕೃಷ್ಣ, ಕೊಕ್ಕಡ



ಶ್ರೀ ಸುಂದರೇಶ್, ಸಕಲೇಶಪುರ

I dont need easy, I just need possible

## ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಪುನಶ್ಚೇತನವನ್ನು ಪಡೆದುಕೊಂಡು ಏಪ್ರಿಲ್ ತಿಂಗಳಲ್ಲಿ ಡಿಸ್ಚಾರ್ಜ್ ಆದವರು



ಶ್ರೀ ಮೆಲ್ವಿನ್ ಮಸ್ಕರೇನ್ಹಸ್
ಮೂಡಿಗೆರೆ





ಶ್ರೀ ಅಭಿಜಿತ್
ಪುತ್ತೂರು





ಶ್ರೀ ಜೀವನ್ ವಿನೋದ್ ಡಿಸೋಜಾ
ಮಂಗಳೂರು





ಶ್ರೀ ಪ್ರದೀಪ್
ಚಿಕ್ಕಮಗಳೂರು



### ಏಪ್ರಿಲ್ ತಿಂಗಳ ಸೇವಾ ಕಾರ್ಯಗಳು

| | | |
|---|---|---|
| 1. | ಗಾಲಿಕುರ್ಚಿ | – 3 |
| 2. | ಸೆಲ್ಫ್‌ಕೇರ್ ಕಿಟ್ ಮತ್ತು ಮೆಡಿಕಲ್ ಕಿಟ್ | – 38 |

# ಸೇವಾ ಸಂಗಮ

(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಆನ್ಲೈನ್ ಕಾರ್ಯಾಗಾರ-32 )

**ಬೆನ್ನುಹುರಿ ಅಪಘಾತ ಮತ್ತು ಅದರ ಬಗ್ಗೆ ಆರೈಕೆದಾರರಿಗೆ ಮಾಹಿತಿ**

**ಸಂಪನ್ಮೂಲ ವ್ಯಕ್ತಿ**




**ಡಾ. ವೈಶಾಖ್ ಬಿ. ಭಟ್**

ಸ್ಪೈನ್ ಶಸ್ತ್ರಚಿಕಿತ್ಸಕರು, ಕೆಎಂಸಿ ಆಸ್ಪತ್ರೆ, ಅತ್ತಾವರ, ಮಂಗಳೂರು

ದಿನಾಂಕ : 28/04/2025
ಸಮಯ : 4pm to 5pm
Live On : Google Meet
https://meet.google.com/phg-uobd-ofh

SEVA BHARATHI
ಸೇವಾಭಾರತಿ ಕನ್ಯಾಡಿ -II
9945491241
www.sevaabharathi.org




ಏಪ್ರಿಲ್ ತಿಂಗಳ ಸೇವಾಸಂಗಮ ಆನ್‌ಲೈನ್ ಮಾಹಿತಿ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಡಾ. ವೈಶಾಕ್ ಭಟ್ ಸ್ಪೈನ್ ಶಸ್ತ್ರಚಿಕಿತ್ಸಕರು, ಕೆ.ಎಂ.ಸಿ. ಆಸ್ಪತ್ರೆ, ಮಂಗಳೂರು ಇವರು ಬೆನ್ನುಹುರಿ ಅಪಘಾತ ಮತ್ತು ಅದರ ಬಗ್ಗೆ ಆರೈಕೆದಾರರಿಗೆ ಮಾಹಿತಿ ಇತ್ತರು. ಕಾರ್ಯಾಗಾರದಲ್ಲಿ ಒಟ್ಟು 42 ಮಂದಿ ಭಾಗವಹಿಸಿದ್ದರು.

# ತಮ್ಮ ವಿಶೇಷ ದಿನವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿ ಮಾದರಿಯಾದವರು

ಸೇವಾಧಾಮದಲ್ಲಿ ಪುನಶ್ಚೇತನ ಪಡೆಯುತ್ತಿರುವ ದಿವ್ಯಾಂಗರಿಗೆ ಒಂದು ಹೊತ್ತಿನ ಊಟಕ್ಕಾಗಿ ದೇಣಿಗೆಯನ್ನು ನೀಡುವ ಮೂಲಕ ತಮ್ಮ ವಿಶೇಷ ದಿನವನ್ನು ಆಚರಿಸಿ ಎಲ್ಲರಿಗೂ ಮಾದರಿಯಾಗಿದ್ದೀರಿ. ತಮ್ಮ ಈ ಸೇವಾಕಾರ್ಯಕ್ಕೆ ಕೃತಜ್ಞತೆಗಳು...


ಡಾ. ರಾಮಕೃಷ್ಣ ಭಟ್ ಜಿ.ಎನ್, ಕನ್ಯಾಡಿ


ಡಾ. ಈಶ್ವರ ಕೀರ್ತಿ ಸಿ. ಮಂಗಳೂರು


ಶ್ರೀ ಗಿರೀಶ್ ಎಸ್. ಬೇಲೂರು


ಶ್ರೀಮತಿ ಜೋಸ್ಪಿನಾ. ಪಿ ಬೆಳ್ತಂಗಡಿ


ಶ್ರೀ ಕೆ. ಸೂರ್ಯನಾರಾಯಣ ರಾವ್, ದೊಂಡೋಲೆ


ಶ್ರೀ ಮಧ್ವಮೂರ್ತಿ ಉಡುಪಿ


ಶ್ರೀ ಮನೋಜ್ ಶೆಟ್ಟಿ ಶಿರಸಿ


ಶ್ರೀ ಮೋಹನ್ ಎಸ್ ನಿಡ್ಲೆ


ಶ್ರೀ ಪುರುಷೋತ್ತಮ ಸೋಮಾ ಮರಾಠಿ, ಕುಮಟಾ


ಶ್ರೀ ರಾಜೇಂದ್ರ ಅಜ್ರಿ ಕನ್ಯಾಡಿ


ಶ್ರೀಮತಿ ಅರ್ಚನಾ ಚೇತನ್, ಬೆಂಗಳೂರು


ಕು. ಸಮೀಕ್ಷಾ ಧರ್ಮಸ್ಥಳ


ಕು. ಸಂತೃಪ್ತಿ ಆರ್. ಫಡ್ಕೆ


ಶ್ರೀಮತಿ ಸವಿತಾ ಎಂ.ರಾವ್, ಕನ್ಯಾಡಿ


ಶ್ರೀ ಸುಮಂತ್ ಕುಮಾರ್ ಬಿ.ಜೈನ್,ಗುರುವಾಯನಕೆರೆ



ಮಾಸ್ಟರ್ ತೇಜಸ್ ಆರ್., ಬೆಳ್ತಂಗಡಿ


ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ, ಉಡುಪಿ


ಶ್ರೀ ಯತೀಶ್ ಸುವರ್ಣ ಕನ್ಯಾಡಿ


ರೋ। ಮಹೇಶ್ ರವೀಂದ್ರ ತೆಲಂಗ ಶ್ರೀಮತಿ ಮಂದಾರ್ತಿ, ಶಿರಸಿ


ಬೇಬಿ ಭಾವನ ಜಯರಾಜ್, ಕಾನರ್ಪ

## ಪುಣ್ಯಸ್ಮರಣೆ


ಶ್ರೀಮತಿ ಓಂಕಾರಮ್ಮ ಜೆ.ಆರ್ ಬೆಂಗಳೂರು


ಶ್ರೀಮತಿ ಸುಧಾ ಅನಂತ ಗೋಖಲೆ, ಮುಂಡಾಜೆ

ನಿಮಗಿದು ತಿಳಿದಿರಲಿ

## ಬೆನ್ನುಹುರಿ ನರಗಳ ಚಲನೆ

ಬೆನ್ನುಹುರಿಯ ಜೀವಕೋಶಗಳು L1/L2 ಕಶೇರುಕ ಮಟ್ಟದಲ್ಲಿ ಕೊನೆಗೊಂಡರೂ, ಪ್ರತಿ ವಿಭಾಗದ ಬೆನ್ನುಹುರಿ ನರಗಳು ಅನುಗುಣವಾದ ಕಶೇರುಕ ಮಟ್ಟದಲ್ಲಿ ನಿರ್ಗಮಿಸುತ್ತವೆ. ಕೆಳಗಿನ ಬೆನ್ನುಹುರಿಯ ನರಗಳಿಗೆ, ಅವು ಕಶೇರುಕ ಕಾಲಮ್‌ನಿಂದ ಅವುಗಳ ಬೇರುಗಳಿಗಿಂತ ಕಡಿಮೆ (ಹೆಚ್ಚು ಕಾಡರಾಗಿ) ನಿರ್ಗಮಿಸುತ್ತವೆ ಎಂದರ್ಥ.

ಈ ನರಗಳು ಆಯಾ ಬೇರುಗಳಿಂದ ಕಶೇರುಕ ಕಾಲಮ್‌ನಿಂದ ನಿರ್ಗಮಿಸುವ ಬಿಂದುವಿಗೆ ಪ್ರಯಾಣಿಸುವಾಗ, ಕೆಳಗಿನ ಬೆನ್ನುಹುರಿ ಭಾಗಗಳ ನರಗಳು ಕಾಡ ಈಕ್ವಿನಾ ಎಂಬ ಬಂಡಲ್‌ರಾವನ್ನು ರೂಪಿಸುತ್ತವೆ.

## ನಮ್ಮ ಯೋಜನೆಗಳು

**ಆರೋಗ್ಯಮ್ :** ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆ್ಯಂಬುಲೆನ್ಸ್ ಸೇವೆಗಳು.

**ಸಬಲಿನಿ :** ಮಹಿಳಾ ಸ್ವಾವಲಂಬನಕ್ಕಾಗಿ ವೃತ್ತಿ ತರಬೇತಿ.

**ಸೇವಾಧಾಮ :** ಬೆನ್ನುಹುರಿ ಅಪಘಾತಗೊಂಡವರಿಗಾಗಿ ಪುನಶ್ಚೇತನ ಕೇಂದ್ರ.

**ಸೇವಾಪಥ :** ಮಾಸಿಕ ಈ–ನ್ಯೂಸ್ ಲೆಟರ್ .

**ಸೇವಾ ಸಂಗಮ :** ಬೆನ್ನುಹುರಿ ಅಪಘಾತಗೊಂಡವರಿಗಾಗಿ ಆನ್‌ಲೈನ್ ಮೂಲಕ ಸಂಬಂಧಿತ ತಜ್ಞರಿಂದ ಮಾಹಿತಿ, ತರಬೇತಿ ಹಾಗೂ ಮಾರ್ಗದರ್ಶನ.

**ಆರೋಗ್ಯ ಬಿಂದು:** ಫಲಾನುಭವಿಗಳಿಗೆ ಕನಿಷ್ಠ ದರದಲ್ಲಿ ಸೆಲ್ಫ್‌ಕೇರ್ & ಮೆಡಿಕಲ್ ಕಿಟ್‌ಗಳು

### ತಾವು ಹೀಗೂ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಬಹುದಾಗಿದೆ

### ಸಂಸ್ಥೆಗೆ ದೇಣಿಗೆ ಮೂಲಕ ಸಹಕಾರ

| | |
|---|---|
| ರೂ. 2000/– | ನೀಡುವುದರ ಮೂಲಕ ಒಟ್ಟು ಫಲಾನುಭವಿಯ ಒಂದು ತಿಂಗಳ ಮೆಡಿಕಲ್ ಕಿಟ್‌ಗಳಿಗಾಗಿ ಸಹಕಾರ. |
| ರೂ. 6000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಗಾಗಿ ಸಹಕಾರ |
| ರೂ. 4500/– | ನೀಡುವುದರ ಮೂಲಕ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಯ ಸಂದರ್ಭ ಪೋಷಕರಿಗಾಗಿ ಸಹಕಾರ |
| ರೂ. 3000/– | ನೀಡುವುದರ ಮೂಲಕ ಸೇವಾಧಾಮದಲ್ಲಿ ಒಂದು ಹೊತ್ತಿನ ಊಟೋಪಚಾರಕ್ಕೆ ಸಹಕಾರ |
| ರೂ. 10000/– | ನೀಡುವುದರ ಮೂಲಕ ಸಮುದಾಯ ಭೇಟಿಗಾಗಿ ಸಹಕಾರ |
| ರೂ. 15000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಗಳಿಗೆ ಒಂದು ಗಾಲಿಕುರ್ಚಿಯ ಕೊಡುಗೆ |
| ರೂ. 10000/– | ನೀಡುವುದರ ಮೂಲಕ ಕೇಂದ್ರದಲ್ಲಿ ಹುಟ್ಟು ಹಬ್ಬದ ಆಚರಣೆ ಮಾಡುವುದು |

### DONATE & JOIN US IN OUR MISSION

A/c Holder - M/s. Sevabharathi(R)
A/c No - 01682200072637
IFS Code - CNRB0010168
Bank - Canara Bank, Kokkada Branch

### Support us for constructions of Rehabilitation Centre

A/c Name : Sevabharathi
A/c No : 139322010000383
IFSC : UBIN0913936
Account Type : Savings Account
Union Bank of India, UJIRE Branch

*We are put in situations to build our character... not destroy us*

# ಬಹಾಲ್ ಫೌಂಡೇಶನ್ ಮೂಲಕ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಆಶಾಕಿರಣವಾದ ಶಿಜೋ ವರ್ಗೀಸ್

ಶಿಜೋ ವರ್ಗೀಸ್‌ರವರು ಮೂಲತಃ ಮಂಗಳೂರಿನ ಕುಳಾಯಿ ನಿವಾಸಿಯಾಗಿದ್ದು, 11 ಫೆಬ್ರವರಿ 1989 ರಲ್ಲಿ ದಿ. ಕೆ.ವಿ.ವರ್ಗೀಸ್ ಮತ್ತು ಶ್ರೀಮತಿ ರೀಚಲ್ ವರ್ಗೀಸ್ ದಂಪತಿಯ ಪುತ್ರರಾಗಿ ಜನಿಸಿದರು. ಮಂಗಳೂರು ಭಾರತಿ ಇಂಗ್ಲಿಷ್ ಮೀಡಿಯಂ ಶಾಲೆಯಲ್ಲಿ 4 ನೇ ತರಗತಿಯನ್ನು ಓದುತ್ತಿದ್ದ ಸಮಯದಲ್ಲಿ ಇವರದ್ದು ಸಣ್ಣ ವಯಸ್ಸು ಅನೇಕ ಕನಸನ್ನು ಹೊತ್ತುಕೊಂಡಿದ್ದ ಇವರ ಬಾಲ್ಯದಲ್ಲಿ ನಡೆದದ್ದೇ ಬೇರೆ. ಸಣ್ಣ ವಯಸ್ಸಿನಲ್ಲಿ ಆಟವಾಡುತಿದ್ದಾಗ ಬಾಲ್ ಮನೆಯ ಮಹಡಿಯ ಮೇಲೆ ಬಿದ್ದ ಕಾರಣ ಅದನ್ನು ತೆಗೆದುಕೊಂಡು ಬರಲು ಮೇಲಕ್ಕೆ ಹೋಗಿ ಆಯ ತಪ್ಪಿ ಕೆಳಕ್ಕೆ ಬಿದ್ದಾಗ ಬೆನ್ನುಹುರಿ ಅಪಘಾತಕ್ಕೆ ಒಳಗಾದರು. 9 ನೇ ವಯಸ್ಸಿನಲ್ಲಿ ದೊಡ್ಡ – ದೊಡ್ಡ ಆಸೆ, ಆಕಾಂಕ್ಷೆಯನ್ನು ಹೊತ್ತುಕೊಂಡಿದ್ದ ಇವರ ಜೀವನದಲ್ಲಿ ದೊಡ್ಡದಾದ ಸವಾಲುಗಳೇ ಎದುರಾಯಿತು. ಮಹಡಿಯಿಂದ ಬಿದ್ದಾಗ ಚಿಕಿತ್ಸೆಯನ್ನು ಪಡೆದುಕೊಳ್ಳಲು ಮಂಗಳೂರಿನ ಫಾದರ್‌ಮುಲ್ಲರ್ ಆಸ್ಪತ್ರೆಗೆ ದಾಖಲಿಸಲಾಯಿತು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಸಂದರ್ಭದಲ್ಲಿ ಅವರಿಗೆ ಬೆನ್ನುಹುರಿ ಅಪಘಾತದ ಬಗ್ಗೆ ವಿಷಯ ತಿಳಿಸಿದರು. ಇನ್ನು ಮುಂದೆ ನಡೆದಾಡಲು ಸಾಧ್ಯವಿಲ್ಲ ಹಾಗೂ ಗಾಲಿಕುರ್ಚಿಯ ಮುಖಾಂತರ ಮಾತ್ರ ಚಲಿಸಲು ಸಾಧ್ಯವೆಂದು ಮನವರಿಕೆ ಮಾಡಿದರು. ಆಸ್ಪತ್ರೆಯಲ್ಲಿಯೇ ಇದ್ದು ಚಿಕಿತ್ಸೆಯನ್ನು ಪಡೆದು ಕೊಂಡರು.

ಚಿಕಿತ್ಸೆಯನ್ನು ಪಡೆದ ನಂತರ 2–3 ತಿಂಗಳು ಆಯುರ್ವೇದಿಕ್ ಪಂಡಿತರೊಬ್ಬರು ಮನೆಗೆ ಬಂದು ಚಿಕಿತ್ಸೆಯನ್ನು ನೀಡುತ್ತಿದ್ದರು, ಬೆಂಗಳೂರಿನ ನೆಲಮಂಗಲದಲ್ಲಿ 1 ವರ್ಷಗಳ ತನಕ ಆಯುರ್ವೇದಿಕ್ ಚಿಕಿತ್ಸೆಯನ್ನು ಪಡೆದುಕೊಂಡು ನಂತರ 4 ವರ್ಷ ಕೇರಳದಲ್ಲಿಯೂ ಚಿಕಿತ್ಸೆಯನ್ನು ಪಡೆದುಕೊಂಡು ಗಾಲಿಕುರ್ಚಿಯಲ್ಲೇ ಇದ್ದು ತನ್ನ ಕೆಲಸವನ್ನು ತಾನು ಮಾಡಿಕೊಳ್ಳುವಷ್ಟು ಚೇತರಿಸಿ ಕೊಂಡರು. ನಂತರ ಮಂಗಳೂರಿಗೆ ಬಂದು ತನ್ನ ವಿದ್ಯಾಭ್ಯಾಸವನ್ನು ಮುಂದುವರಿಸಿದರು. ಓದುತ್ತಿರುವ ಸಂದರ್ಭದಲ್ಲಿ ತನ್ನ ತಂದೆಯ ಅಕಾಲಿಕ ಮರಣ ಅವರನ್ನು ಇನ್ನಷ್ಟು ಗಾಸಿಗೊಳಿಸಿತು. NIOS ಮುಖಾಂತರ 10ನೇ ತರಗತಿಯ ಪರೀಕ್ಷೆಯನ್ನು ಬರೆದು ಪಿಯುಸಿ ವಿದ್ಯಾಭ್ಯಾಸವನ್ನು ಸಹ ಪೂರ್ಣಗೊಳಿಸಿದರು. ನಂತರ 2019 ರಲ್ಲಿ ಬೆಂಗಳೂರಿನಲ್ಲಿ ಸಮರ್ಥನ ಟ್ರಸ್ಟ್ ಫಾರ್ ಡಿಸೆಬಲ್‌ನಲ್ಲಿ 6 ತಿಂಗಳ ವಿಎ ಕೋರ್ಸ್ ಮಾಡಲು ಮುಂದಾದರು. ಈ ಕೋರ್ಸ್ ಕಲಿಯುತ್ತಿರುವ ಸಂದರ್ಭದಲ್ಲಿ ಅಲ್ಲಿಯೇ ಅವರಿಗೆ ಡೊನೇಷನ್ ಕೋ–ಆರ್ಡಿನೇಟರ್ ಆಗಿ ಕೆಲಸ ದೊರಕಿತು. 1 ವರ್ಷಗಳ ಕಾಲ ಕೆಲಸವನ್ನು ಮಾಡಿ ಕಾರಣಾಂತರದಿಂದ ಕೆಲಸವನ್ನು ನಿಲ್ಲಿಸಿದರು. ಇನ್‌ಕಮ್ ಕನ್ಸಲ್ಟೆನ್ಸಿಯಲ್ಲಿ ಅಕೌಂಟೆಂಟ್ ಎಕ್ಸಿಕ್ಯೂಟಿವ್ ಆಗಿ 'ವರ್ಕ್ ಫ್ರಂ ಹೋಮ್' ಕೆಲಸವನ್ನು ಮಾಡಲು ಮುಂದಾದರು. ನಂತರ ಕೇರಳದ ತಿರುವಲ್ಲದಲ್ಲಿ ಸ್ವಯಂಸೇವಕರಾಗಿ ಕೆಲಸವನ್ನು ಮಾಡಿ. ಬೇರೆಬೇರೆ ಸಂಸ್ಥೆಗಳಲ್ಲಿ ಕೆಲಸವನ್ನು ಮಾಡುತ್ತಾ ಮತ್ತು ಹಲವಾರು ಕೋರ್ಸುಗಳನ್ನು ಮಾಡುತ್ತ ಬಂದಿದ್ದಾರೆ.



2024 ರಲ್ಲಿ ಕೇರಳದಲ್ಲಿ ಲೀಡರ್‌ಶಿಪ್ ಡೆವಲಪ್‌ಮೆಂಟ್ ಪ್ರೋಗ್ರಾಮ್ ಅನ್ನು ಮಾಡಲು ಪ್ರಾರಂಭಿಸಿದರು. ಸಂಸ್ಥೆಯ ಮೂಲಕ ಕೆಲಸವನ್ನು ಮಾಡುವುದೇ ಈ ಕೋರ್ಸ್‌ನ ಮುಖ್ಯ ಉದ್ದೇಶವಾಗಿದೆ. ಹಾಗಾಗಿ ಮಾರ್ಚ್ 31 ರ ತನಕ ಶಿಜೋ ಅವರು ಈ ಕೋರ್ಸ್‌ನ್ನು ಮಾಡಿ ಇದೀಗ ಬಹಾಲ್ ಫೌಂಡೇಶನ್ ಸಂಸ್ಥೆಯನ್ನು ಪ್ರಾರಂಭಿಸಿ–ದರು. ಬಹಲ್ ಫೌಂಡೇಷನ್ ಸಂಸ್ಥೆಯು ಬೆನ್ನುಹುರಿ ಅಪಘಾತ–ಕ್ಕೊಳಗಾದ ದಿವ್ಯಾಂಗರಿಗೆ ಪುನಶ್ಚೇತನವನ್ನು ಒದಗಿಸುವುದು, ಅವರಿಗೆ ಅಗತ್ಯ ಇರುವ ಸೌಕರ್ಯವನ್ನು ನೀಡುವುದು ಇದರ ಮುಖ್ಯ ಉದ್ದೇಶವಾಗಿದೆ. ಪ್ರಸ್ತುತ ಇದೀಗ ದಿವ್ಯಾಂಗರಿಗೆ ಜೀವನೋಪಾಯ –ವನ್ನು ಕಲ್ಪಿಸುವುದರ ಬಗ್ಗೆ ಮಾಹಿತಿಯನ್ನು ನೀಡುತ್ತ ಮತ್ತು ಬೇರೆ – ಬೇರೆ ಸಂಸ್ಥೆಗಳಿಗೆ ಭೇಟಿ ನೀಡಿ ಟ್ರೈನಿಂಗ್ ಮಾಡುತ್ತಿದ್ದಾರೆ. ಈ ಸಂಸ್ಥೆಯನ್ನು ಇನ್ನಷ್ಟು ದೊಡ್ಡ ಸಂಸ್ಥೆಯನ್ನಾಗಿ ಬೆಳೆಸಿ ದಿವ್ಯಾಂಗರ ಬಾಳಲ್ಲಿ ಬೆಳಕಾಗ ಬೇಕೆಂಬುದೇ ನಮ್ಮೆಲ್ಲರ ಆಶಯವಾಗಿದೆ.